# ಗಣಿತ

## ಭಾಗ - 2

## ತರಗತಿ
## III

Mathematics
Part-2
STD-III
Kannada Medium

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2024

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ,
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ,
ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

## ಗಣಿತ

**3**

**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@gmail.com, Phone : 0471 - 2341883,
Typesetting and Layout : SCERT
First Edition : 2024
*Printed at* : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ನಾವು ಗಣಿತದಲ್ಲಿ, ಆಟವಾಡಿ, ಬಣ್ಣ ಹಚ್ಚಿ,
ಹಲವು ವಿಷಯಗಳನ್ನು ಅರ್ಥೈಸಿಕೊಂಡಿದ್ದೇವಲ್ಲವೇ?
ಎಣಿಸುವುದಕ್ಕೂ ಲೆಕ್ಕ ಮಾಡುವುದಕ್ಕೂ ಆಕೃತಿಗಳನ್ನು
ಗುರುತಿಸುವುದಕ್ಕೂ ನಮಗೆ ತಿಳಿದಿದೆ.
ಇನ್ನೂ ಹಲವಾರು ವಿಷಯಗಳನ್ನು ಕಲಿಯಲು ಬಾಕಿಯಿದೆ. ಹೆಚ್ಚು
ಹೆಚ್ಚು ದೊಡ್ಡ ಸಂಖ್ಯೆಗಳು, ಅವುಗಳ ಕ್ರಿಯಾರೀತಿಗಳು,
ಸಂಖ್ಯಾ ಸಂಬಂಧಗಳನ್ನು ಕಂಡುಹಿಡಿಯುವುದು, ಸಮಸ್ಯಾ ಪರಿಹಾರ,
ಪಟ್ಟಿಗಳ ವಿಶ್ಲೇಷಣೆ ಹೀಗೆ ಹಲವು ವಿಚಾರಗಳು.
ವಿಭಿನ್ನ ರೀತಿಯಲ್ಲಿ ಚಿಂತನೆ ಮಾಡಿ, ವಿವಿಧ ರೀತಿಗಳನ್ನು
ಕಂಡುಹಿಡಿದು ಯುಕ್ತಿಯುಕ್ತವಾಗಿ ಸಮರ್ಥಿಸಿ ಕಂಡುಕೊಂಡ
ವಿಷಯಗಳನ್ನು ಹಂಚಿಕೊಂಡು
ನಾವು ಮುಂದೆ ಸಾಗುವ...

ಪ್ರೀತಿಯಿಂದ,


ಡಾ. ಜಯಪ್ರಕಾಶ್ ಆರ್. ಕೆ.
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.,ಕೇರಳ

# BOOK DEVELOPMENT TEAM

**Advisor**

**Dr. E. Krishnan,**
Head, Department of Mathematics (Retd.),
University College, Thiruvananthapuram

**Chairperson**

**Dr. Gokuladasan pillai C.**
Curriculum Head (Retd.), S.C.E.R.T

**Experts**

**Dr. M. Shaheedali**
Senior Lecturer, DIET, Palakkad

**Dr. Rajesh K. P.**
Senior Lecturer, DIET, Kannur

**Members**

**Swaminathan K.**
Headmaster (Retd),
Govt. LP School, Palot,
Thiruvananthapuram

**Biju T.**
Headmaster,
Govt. SMVLPS
Tevalakkara,Kollam

**Sajeevan C. V.**
A.L.P School Kaariil,
Cheruvathur,
Kasaragod

**Srivishakhan**
Headmaster (Retd.)
G.L.P. School Cherukulathur,
Kozhikode

**Beenastifan**
S. P. T. P. M. Govt.
U.P.S. Kuravankonam,
Thiruvananthapuram

**Aishwarya Soman**
S.M.S.G.U.P.S.
Chandanakunn,
Pathanamthitta

**G. G. Varghese P.**
Trainer
B.R.C. Edapalli

**Sujith K. R.**
UPST, Mepail East
S.B. School Vadakara,
Kozhikode

**Shaji Mathew**
Pathanamthitta

**Anoop K. P.**
H.S.T. Drawing
P.M.S.A.P.T.H.S.S. Kakov,
Vazhayur, Malappuram

**Dhanesan M. V.**
H.S.S.T English,
GFHSS Padannakkadappuram,
Kasaragod

## Kannada Version

**Experts**

**Dr. P. Sri Krishna Bhat**
Prof. of Kannada (Retd.)
Govt. College, Kasaragod

**Ashoka M.**
Headmaster
G.H.S.S. Kundamkuzhy

**Participants**

**Shylesh M.,** Headmaster., S.S.A.L.P.S. Mudoorthoke
**Devananda K.,** L.P.S.T., G.L.P.S. Majibail
**Kishore Kumar S. N.,** L.P.S.T., G.B.L.P.S. Bombrana
**Melvin D Souza P.,** L.P.S.T., G.H.S.S. Bekur

**Academic Co-ordinator**

**Dr. Abhilash Babu P.**
Research Officer , S.C.E.R.T.

STATE COUNCIL OF EDUCATION RESEARCH AND TRAINING (SCERT)
Vidhyabhavan, Poojappura,Thiruvananthapuram 695 012

# ಅನುಕ್ರಮಣಿಕೆ


| | | |
|---|---|---|
| 07 | ಕಳೆಯುವುದೋ ಕೂಡಿಸುವುದೋ | 95 |
| 08 | ಟಿಕ್... ಟಿಕ್... ಟಿಕ್... | 113 |
| 09 | ಆವರ್ತಿಸಿ ಕೂಡಿಸಿದಾಗ | 127 |
| 10 | ಪಾಲು ಮಾಡುವ | 145 |
| 11 | ಬಾಟ್ಲಿಯಲ್ಲೆಷ್ಟು ? ಚೀಲದಲ್ಲೆಷ್ಟು ? | 159 |
| 12 | ಒಂದೇ ನೋಟದಲ್ಲಿ | 173 |




ಈ ಪುಸ್ತಕದಲ್ಲಿ ಅನುಕೂಲಕ್ಕಾಗಿ ಕೆಳಗೆ ನೀಡಿರುವ ಚಿಹ್ನೆಯನ್ನು ಉಪಯೋಗಿಸಲಾಗಿದೆ.



ಲೆಕ್ಕ ಮಾಡಿ ನೋಡುವ.

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 7

# ಕಳೆಯುವುದೋ ಕೂಡಿಸುವುದೋ



## ಮಣಿಗಳನ್ನು ತುಂಬಿಸುವ




'ಮಣಿಗಳನ್ನು ತುಂಬಿಸುವ' ಆಟವನ್ನು ಆಡಿದಿರಲ್ಲವೇ ?

ಪಟ್ಟಿಯನ್ನು ಪೂರ್ತಿಗೊಳಿಸುವ:

| ಸಂಖ್ಯೆ | ಕೈಯಲ್ಲಿರುವ ಮಣಿಗಳ ಸಂಖ್ಯೆ | 100 ಮಾಡಲು ಬೇಕಾದ ಮಣಿಗಳ ಸಂಖ್ಯೆ |
|---|---|---|
| 1 | 90 | |
| 2 | 75 | |
| 3 | | 20 |
| 4 | 50 | |
| 5 | | 1 |
| 6 | | 12 |
| 7 | 33 | |

ನಾನು ಲೆಕ್ಕ ಮಾಡಿದ ರೀತಿ:

## ಮಣಿಗಳನ್ನು ತೆಗೆಯುವ

'ಮಣಿಗಳನ್ನು ತುಂಬಿಸುವ' ಆಟಕ್ಕಾಗಿ ಪ್ರತಿಯೊಬ್ಬರೂ 100 ರಂತೆ ಮಣಿಗಳನ್ನು ತಂದರು. 10 ಮಕ್ಕಳು ತಂದ ಮಣಿಗಳನ್ನು ಒಂದು ಪಾತ್ರೆಯಲ್ಲಿ ಹಾಕಿದರು.

ಪಾತ್ರೆಯಲ್ಲಿ ಒಟ್ಟು ಎಷ್ಟು ಮಣಿಗಳಿವೆ? [ ]

ಟೀಚರ್ ಪಾತ್ರೆಯಿಂದ ಒಂದು ಮಣಿಯನ್ನು ತೆಗೆದರು.

ಈಗ ಪಾತ್ರೆಯಲ್ಲಿರುವ ಮಣಿಗಳೆಷ್ಟು? [ ]

ಕಂಡುಹಿಡಿದದ್ದು ಹೇಗೆ?




999 ಮಣಿಗಳಿಂದ ಪ್ರತಿಯೊಂದು ಗುಂಪಿಗೂ 111 ರಂತೆ ನೀಡಲಾಯಿತು. ಪ್ರತಿಸಲವೂ ಬಾಕಿ ಉಳಿದ ಮಣಿಗಳ ಸಂಖ್ಯೆಯನ್ನು ಬರೆಯಿರಿ.

| | | | | |
|---|---|---|---|---|
| 999 | – | 111 | = | 888 |
| 888 | – | 111 | = | -------- |
| -------- | – | 111 | = | -------- |
| -------- | – | -------- | = | -------- |
| -------- | – | -------- | = | -------- |
| -------- | – | -------- | = | -------- |
| -------- | – | -------- | = | -------- |
| -------- | – | -------- | = | -------- |
| -------- | – | -------- | = | 0 |

ಎಷ್ಟು ಗುಂಪುಗಳಿಗೆ ಮಣಿಗಳು ಸಿಕ್ಕಿದವು? [ ]



## ಸ್ಥಾನ ಬದಲಾಗುವಾಗ




ಅಬಾಕಸಿನ ಸಂಖ್ಯೆ ಬರೆಯಿರಿ...

ಈ ಸಂಖ್ಯೆಯನ್ನು 231 ಮಾಡಲು ಯಾವೆಲ್ಲಾ ಮಣಿಗಳನ್ನು ತೆಗೆಯಬೇಕು?

ತೆಗೆದ ಮಣಿಗಳನ್ನು ಈ ಅಬಾಕಸಿನಲ್ಲಿ ಇರಿಸಿರಿ...




ಸಿಕ್ಕಿದ ಸಂಖ್ಯೆಯನ್ನು ಬರೆಯಿರಿ...

## ಅಬಾಕಸಿನಲ್ಲಿರುವ ಸಂಖ್ಯೆ




ಅಬಾಕಸಿನಲ್ಲಿರುವ ಸಂಖ್ಯೆ ಯಾವುದು?

- ನೂರುಗಳ ಸ್ಥಾನದಿಂದ ಒಂದು ಮಣಿಯನ್ನು ತೆಗೆದರೆ ಸಿಗುವ ಸಂಖ್ಯೆ ಯಾವುದು?
- ಇನ್ನು ಹತ್ತುಗಳ ಸ್ಥಾನದಿಂದ ಎರಡು ಮಣಿಗಳನ್ನು ತೆಗೆಯಿರಿ... ಸಿಗುವ ಸಂಖ್ಯೆ ಯಾವುದು?
- ಇನ್ನು ಒಂದುಗಳ ಸ್ಥಾನದಿಂದ ನಾಲ್ಕು ಮಣಿಗಳನ್ನು ತೆಗೆದರೆ ಸಿಗುವ ಸಂಖ್ಯೆ ಯಾವುದು?

ಈಗ ಅಬಾಕಸಿನಲ್ಲಿ ಮಣಿಗಳು ಹೇಗಿವೆ?
ಮಣಿಗಳನ್ನು ಚಿತ್ರಿಸಿರಿ...







ಒಂದುಗಳ ಸ್ಥಾನದಿಂದ ಒಂದು ಮಣಿಯನ್ನು ತೆಗೆದು ಹತ್ತುಗಳ ಸ್ಥಾನದಲ್ಲಿ ಇರಿಸಿರಿ.
ಈಗ ಸಂಖ್ಯೆ ಯಾವುದು?

ಮೇಲೆ ಮಾಡಿದ ಕ್ರಿಯೆಯನ್ನು ಹೀಗೆ ಬರೆಯಬಹುದು

| | |
|---|---|
| ಮೊದಲು ಇದ್ದ ಸಂಖ್ಯೆ | $300 + 40 + 7 = 347$ |
| ತೆಗೆದ ಸಂಖ್ಯೆ | $100 + 20 + 4 = 124$ |
| ಉಳಿದ ಸಂಖ್ಯೆ | $200 + 20 + 3 = 223$ |

$347 - 100 = 247$

$247 - 20 = 227$

$227 - 4 = 223$




| ನೂರು | ಹತ್ತು | ಒಂದು |
|---|---|---|
| 3 | 4 | 7 |
| 1 | 2 | 4 |
| 2 | 2 | 3 |

## ಬಾಕಿ ಎಷ್ಟು ?

ಟೀಚರ ಕೈಯಲ್ಲಿ 578 ರೂಪಾಯಿ ಇದೆ. ಅವರು ಅಬಾಕಸ್ ನಿರ್ಮಿಸುವುದಕ್ಕಾಗಿ ಶಾಲಾ ಸೊಸೈಟಿಯಿಂದ ಮಣಿಗಳನ್ನು ಖರೀದಿಸಿದರು.

4 ನೂರು ರೂಪಾಯಿಯನ್ನೂ 6 ಹತ್ತು ರೂಪಾಯಿಯನ್ನೂ 5 ಒಂದು ರೂಪಾಯಿಯನ್ನೂ ನೀಡಿದರು. ಟೀಚರ ಕೈಯಲ್ಲಿ ಎಷ್ಟು ರೂಪಾಯಿ ಬಾಕಿ ಇದೆ ?

ಟೀಚರ್ ನೀಡಿದ ಹಣ ______ ಬಾಕಿ ಹಣ ______







## ಅಬಾಕಸ್ ಖರೀದಿಸಲು

ಇಷಳು ಶಾಲಾ ಸೊಸೈಟಿಯಿಂದ 125 ರೂಪಾಯಿ ಬೆಲೆಯ ಅಬಾಕಸ್ ಖರೀದಿಸಿದಳು. 150 ರೂಪಾಯಿ ನೀಡಿದಳು. ಹಾಗಾದರೆ ಅವಳು ಯಾವ ಯಾವ ನೋಟುಗಳನ್ನು ಕೊಟ್ಟಳು ?

ಸೊಸೈಟಿಯಿಂದ ಸಿಕ್ಕಿದ ಬಾಕಿ ಹಣವೆಷ್ಟು? ______

ಲೆಕ್ಕ ಮಾಡಿದ್ದು ಹೇಗೆ ______

ರೀತಿ (1)

125 + 5 = 130 (ಮೊದಲು 5 ರೂಪಾಯಿ ಸಿಕ್ಕಿತು)

130 + 20 = 150 (ನಂತರ 20 ರೂಪಾಯಿ ಸಿಕ್ಕಿತು)

5 + 20 = 25 (ಒಟ್ಟು 25 ರೂಪಾಯಿ ಸಿಕ್ಕಿತು)

ರೀತಿ (2)

150 – 125
150 – 1 = 149

149 – 125 = 24
24 + 1 = 25

ರೀತಿ (3)

150 – 125
150 – 1 = 149

125 – 1 = 124
149 – 124 = 25

ರೀತಿ (4)

| ಸಂಖ್ಯೆ | ನೂರು | ಹತ್ತು | ಒಂದು |
|---|---|---|---|
| 150 | 1 | 4 | 10 |
| 125 | 1 | 2 | 5 |
| | | 2 | 5 |

## ತೆಗೆಯುವ

ಚಿತ್ರಗಳನ್ನು ನೋಡಿರಿ.



ಇದರಲ್ಲಿ ಎಷ್ಟು ನೂರು ಇದೆ ?

ಎಷ್ಟು ಹತ್ತು ?

ಎಷ್ಟು ಒಂದು?

ಸಂಖ್ಯೆ ಯಾವುದು?

ಇವುಗಳಿಂದ 212 ಚೌಕಗಳನ್ನು ತೆಗೆದರು.

ಬಾಕಿ ಉಳಿದದ್ದು:

ಎಷ್ಟು ನೂರು ?

ಎಷ್ಟು ಹತ್ತು ?

ಎಷ್ಟು ಒಂದು ?

ಸಂಖ್ಯೆ ಯಾವುದು ?

332 - 212 =

ಇದೇ ರೀತಿಯಲ್ಲಿ 338 ರಿಂದ 116ನ್ನು ಕಳೆಯಬಹುದೇ?

ಲೆಕ್ಕ ಮಾಡಿದ್ದು ಹೇಗೆ? ಮಾಡಿದ ರೀತಿಯನ್ನು ಬರೆಯಿರಿ.

## ಇನ್ನು ಯಾರು ?







## ಕಳೆಯುವುದೋ ಕೂಡಿಸುವುದೋ ?

ಶಾಲಾ ಸೊಸೈಟಿಯಿಂದ 2 ದಿನಗಳಲ್ಲಾಗಿ 642 ರೂಪಾಯಿ ಸಿಕ್ಕಿತು. ಒಂದನೇ ದಿನ 253 ರೂಪಾಯಿ ಸಿಕ್ಕಿತು. ಹಾಗಾದರೆ ಎರಡನೇ ದಿನ ಎಷ್ಟು ರೂಪಾಯಿ ಸಿಕ್ಕಿತು?

ಹೇಗೆಲ್ಲಾ ಲೆಕ್ಕ ಮಾಡಬಹುದು?

ರೀತಿ (1)




$7 + 40 + 300 + 42 = 389$

ರೀತಿ (2)

$253 + 47 = 300$

$300 + 342 = 642$

$342 + 47 = 389$

ರೀತಿ (3)

| ಸಂಖ್ಯೆ | ನೂರು | ಹತ್ತು | ಒಂದು |
|---|---|---|---|
| 642 | 5 | 13 | 12 |
| 253 | 2 | 5 | 3 |
| | 3 | 8 | 9 |

## ಬೆಲೆ ಎಷ್ಟು ?

ಸುಷಳ ಕೈಯಲ್ಲಿ 572 ರೂಪಾಯಿ ಇತ್ತು. ಮಣಿಗಳು ಮತ್ತು ಅಬಾಕಸ್ ಖರೀದಿಸಿದ ನಂತರ 394 ರೂಪಾಯಿ ಬಾಕಿ ಉಳಿಯಿತು. ಮಣಿಗಳಿಗೂ ಅಬಾಕಸಿಗೂ ಸೇರಿ ಒಟ್ಟು ಎಷ್ಟು ಹಣವಾಯಿತು?

ಪ್ರಶ್ನೆ ಓದಿದಾಗ ನನಗೆ ಅರ್ಥವಾದದ್ದು:

ಉತ್ತರ ಕಂಡುಹಿಡಿಯಲು ಮಾಡಬೇಕಾದದ್ದು:

ನಾನು ಮಾಡಿದ ರೀತಿ:

ಸಿಕ್ಕಿದ ಉತ್ತರ.

ಸಹಪಾಠಿಗಳು ಮಾಡಿದ ರೀತಿ:

## ವ್ಯತ್ಯಾಸ ಎಷ್ಟು ?

ಇಷ ಮತ್ತು ಸುಷ ಅಬಾಕಸ್ ಆಟ ಆಡುತ್ತಿದ್ದಾರೆ.







| | ಅಬಾಕಸಿನ ಸಂಖ್ಯೆ |
|---|---|
| ಇಷ | |
| ಸುಷ | |

ದೊಡ್ಡ ಸಂಖ್ಯೆ ಮಾಡಿದ್ದು ಯಾರು?

ಸಂಖ್ಯೆಗಳೊಳಗಿನ ವ್ಯತ್ಯಾಸ ಎಷ್ಟು?









ಅಬಾಕಸ್ ನೋಡಿರಿ.

ಮಣಿಗಳ ಸಂಖ್ಯೆಯಲ್ಲಿ ಉಂಟಾದ ಬದಲಾವಣೆ ಏನು ?

ನೂರು : 1 ಕಡಿಮೆಯಾಯಿತು.

ಹತ್ತು : ಬದಲಾಗಲಿಲ್ಲ.

ಒಂದು : 1 ಹೆಚ್ಚಾಯಿತು.




948 ಎಂಬ ಸಂಖ್ಯೆ 849 ಆಗುವಾಗ ವ್ಯತ್ಯಾಸ ಎಷ್ಟು ?

ಅವರು ಕಂಡುಹಿಡಿದ ಇತರ ಸಂಖ್ಯಾ ಜೋಡಿಗಳನ್ನು ನೋಡಿರಿ...

ಅವುಗಳ ನಡುವಿನ ವ್ಯತ್ಯಾಸ ಕಂಡುಹಿಡಿಯಬಹುದೇ ?

| 635, 536 | 423, 324 | 746, 647 |
|---|---|---|
| ......... | ......... | ......... |

ಉತ್ತರಗಳನ್ನು ನೋಡಿರಿ.

ಕಂಡು ಹಿಡಿದದ್ದು ಏನು ?

ಸಂಖ್ಯೆಗಳು ಈ ರೀತಿಯಲ್ಲಾದರೋ? ವ್ಯತ್ಯಾಸ ಎಷ್ಟು?

| 896, 698 | 634, 436 |
|---|---|
| ......... | ......... |

ಕಂಡು ಹಿಡಿದದ್ದು ಏನು ?

## ದೊಡ್ಡ ಸಂಖ್ಯೆ ಮತ್ತು ಸಣ್ಣ ಸಂಖ್ಯೆ

- ಅನುಕ್ರಮವಾದ 3 ಅಂಕೆಗಳನ್ನು ಬರೆಯಿರಿ.
- ಇವುಗಳನ್ನು ಉಪಯೋಗಿಸಿ ಅಂಕೆಗಳು ಆವರ್ತಿಸದೆ ಇರುವ ಅತಿ ದೊಡ್ಡ ಸಂಖ್ಯೆ ಮತ್ತು ಅತಿ ಸಣ್ಣ ಸಂಖ್ಯೆ ಬರೆಯಿರಿ.
- ಅವುಗಳೊಳಗಿನ ವ್ಯತ್ಯಾಸವನ್ನು ಕಂಡುಹಿಡಿಯಿರಿ.

| ಅಂಕೆಗಳು | ದೊಡ್ಡ ಸಂಖ್ಯೆ | ಸಣ್ಣ ಸಂಖ್ಯೆ | ವ್ಯತ್ಯಾಸ |
|---|---|---|---|
| 1, 2, 3 | 321 | 123 | |
| 2, 3, 4 | | | |
| 3, ......., ....... | | | |
| ......., ......., 6 | | | |
| ......., ......., ....... | | | |
| 6, ......., ....... | | | |

ವ್ಯತ್ಯಾಸ ನೋಡಿರಿ.

ಕಂಡು ಹಿಡಿದದ್ದು ಏನು ?

## ಮಣಿಗಳನ್ನು ತೆಗೆದರೆ




ಅಬಾಕಸಿನ ಸಂಖ್ಯೆ ಯಾವುದು ?

ಈ ಅಬಾಕಸಿನ ನೂರರ ಸ್ಥಾನದ ಒಂದು ಮಣಿಯನ್ನು ತೆಗೆದು ಹತ್ತರ ಸ್ಥಾನದಲ್ಲಿ ಇರಿಸಿರಿ.

ಸಿಗುವ ಸಂಖ್ಯೆ ಯಾವುದು ?



ಎರಡು ಸಂಖ್ಯೆಗಳ ನಡುವಿನ ವ್ಯತ್ಯಾಸವೆಷ್ಟು?

ಲೆಕ್ಕ ಮಾಡಿದ ರೀತಿಯನ್ನು ಬರೆಯಿರಿ.

## ಪ್ರವಾಸ

ಇಷ ಮತ್ತು ಮನೆಯವರು ಪ್ರವಾಸದ ತಯಾರಿಯಲ್ಲಿದ್ದಾರೆ. ಅವರು ಬ್ಯಾಗ್ ಖರೀದಿಸಲು ಅಂಗಡಿಗೆ ಬಂದರು.




ನೀಲಿ ಬ್ಯಾಗಿನ ಬೆಲೆ ______ ಕೆಂಪು ಬ್ಯಾಗಿನ ಬೆಲೆ ______

ನೀಲಿ ಬ್ಯಾಗಿಗಿಂತ ಕೆಂಪು ಬ್ಯಾಗಿನ ಬೆಲೆ ಎಷ್ಟು ಹೆಚ್ಚು?

ನಾನು ಲೆಕ್ಕ ಮಾಡಿದ ರೀತಿ: | ಸಹಪಾಠಿಗಳು ಮಾಡಿದ ರೀತಿ:




## ಮಡಕ್ಕರೆಗೆ...

ಮರುದಿನ ಪ್ರಯಾಣ ಆರಂಭವಾಯಿತು. ಕಾರಿನಲ್ಲಿ ಪ್ರಯಾಣ. ಪ್ರಯಾಣ ಆರಂಭಿಸುವಾಗ ಮೀಟರಿನಲ್ಲಿ ಕಾಣುವ ಸಂಖ್ಯೆಯನ್ನು ಇಷ ಬರೆದಿಟ್ಟಳು. ಕೊನೆಯ ಮೂರಂಕೆಗಳನ್ನು ಅವಳು ಬರೆದಳು.

ಇಷ ಬರೆದಿರುವುದು **568**

19 ಕಿಲೋಮೀಟರ್ ಸಂಚರಿಸಿದ ನಂತರ ದೂರವನ್ನು ಸೂಚಿಸುವ ಬೋರ್ಡ್ ಕಂಡಳು.




ಇಷಳ ಮನೆಯಿಂದ ಮಡಕ್ಕರೆಗೆ ಎಷ್ಟು ದೂರವಿದೆ ?

ಇನ್ನೂ ಮುಂದೆ ಸಂಚರಿಸಿದಾಗ ಮತ್ತೊಂದು ಬೋರ್ಡ್ ಕಂಡಳು.




ಅವರು ಎಷ್ಟು ದೂರ ಸಂಚರಿಸಿದರು ?

ಮಡಕ್ಕರೆಗೆ ತಲುಪಿದಾಗ ಮೀಟರಿನ ಕೊನೆಯ ಮೂರಂಕೆಗಳನ್ನು ಬರೆಯಿರಿ.

ಪ್ರಶ್ನೆ ಓದಿದಾಗ ನನಗೆ ಅರ್ಥವಾದದ್ದು:

ನಾನು ಲೆಕ್ಕ ಮಾಡಿದ ರೀತಿ:

ಅವರು ಮಧ್ಯಾಹ್ನದ ಊಟ ಮಾಡಲು ಹೋಟೆಲಿಗೆ ಬಂದರು. ಅಮ್ಮ ಹಣ ಕೊಟ್ಟರು. 578 ರೂಪಾಯಿಯಾಯಿತು. ಚಹಾ ಕುಡಿದಾಗಲೂ ಅಮ್ಮ 175 ರೂಪಾಯಿಯನ್ನು ಕೊಟ್ಟಿದ್ದರು. ಅಮ್ಮನ ಕೈಯಲ್ಲಿ 968 ರೂಪಾಯಿ ಇತ್ತು. ಈಗ ಎಷ್ಟು ರೂಪಾಯಿ ಬಾಕಿ ಇದೆ ?

ನಾನು ಲೆಕ್ಕ ಮಾಡಿದ ರೀತಿ:

## ಮೌಲ್ಯಮಾಪನ ಚಟುವಟಿಕೆಗಳು

### 1. ಅಬಾಕಸ್ ಚಿತ್ರಿಸುವ




ಈ ಅಬಾಕಸಿನಿಂದ ಎಷ್ಟು ಮಣಿಗಳನ್ನು ತೆಗೆದರೆ 101 ಸಿಗಬಹುದು ?

ನೂರು ☐

ಹತ್ತು ☐

ಒಂದು ☐

101 ಎಂಬ ಸಂಖ್ಯೆಯನ್ನು ಅಬಾಕಸಿನಲ್ಲಿ ಚಿತ್ರಿಸಿರಿ.

## 2. ಜೇನುಗೂಡು



ರಾಣಿ ಜೇನು ನೊಣದ ಗೂಡು ಕಂಡುಹಿಡಿಯಲು ಸಹಾಯ ಮಾಡುವಿರಾ ?







**ಗೂಡು ಕಂಡುಹಿಡಿಯಲು**

- ಹೂವಿನ ಪ್ರತಿಯೊಂದು ಸಂಖ್ಯೆಯಿಂದ ಜೇನು ನೊಣದಲ್ಲಿರುವ ಪ್ರತಿಯೊಂದು ಸಂಖ್ಯೆಯನ್ನು ಕಳೆಯಬೇಕು.
- ಸಿಕ್ಕಿದ ಉತ್ತರಗಳನ್ನು ಗೂಡಿನ ನಂಬರುಗಳಾಗಿ ದೊಡ್ಡದರಿಂದ ಸಣ್ಣದರವರೆಗೆ ಕ್ರಮವಾಗಿ ಬರೆಯಬೇಕು.

ಗೂಡು ಕಂಡು ಹಿಡಿದು ಬಣ್ಣ ಹಚ್ಚಿರಿ...

**ರಾಣಿ ಜೇನು ನೊಣದ ಗೂಡು**
- ಅಂಕೆಗಳ ಮೊತ್ತ 10
- ಒಂದು ಅಂಕೆ ಆವರ್ತಿಸುತ್ತದೆ.



## 3. ಕಳೆಯಲು ಕೂಡಿಸುವ

| | | | |
|---|---|---|---|
| | 500 | | |
| 400 | 300 | | 900 |
| | | | |
| | 900 | | |

| | | | |
|---|---|---|---|
| | 325 | | |
| 245 | | | 750 |
| | 250 | | |
| | 750 | | |

| | | | |
|---|---|---|---|
| | 314 | | |
| 128 | | | 869 |
| | 208 | | |
| | 869 | | |

| | | | |
|---|---|---|---|
| | 435 | | |
| | | 178 | 961 |
| | 210 | | |
| | 961 | | |

## 4. ಲೆಕ್ಕ ಮಾಡುವ ಕೋಣೆ ತುಂಬಿಸುವ

| | | |
|---|---|---|
| 1 | 2 | 3 |
| 4 | 5 | 6 |
| 7 | 8 | 9 |

1. 300 ರಿಂದ 4 ಕಡಿಮೆ ಮಾಡಿರುವುದು.
2. 200 ರೊಂದಿಗೆ 12 ಸೇರಿಸಿದ್ದು.
3. 136 + 136
4. 500 ರಿಂದ 264 ಕಡಿಮೆ ಮಾಡಿದ್ದು.
5. 100 + 160
6. 400 – 116
7. 399 – 151
8. 300 ಕ್ಕೆ 8 ಸೇರಿಸಿದ್ದು.
9. 524 – 300

**ಕೋಣೆ ತುಂಬಿಸಿದಿರಲ್ಲವೇ**

- ಮೊದಲ ಅಡ್ಡ ಸಾಲಿನ ಮೂರು ಸಂಖ್ಯೆಗಳನ್ನು ಕೂಡಿಸಿ ನೋಡಿರಿ.
- ಎರಡನೇ ಅಡ್ಡ ಸಾಲಿನ ಮೂರು ಸಂಖ್ಯೆಗಳನ್ನು ಕೂಡಿಸಿ ನೋಡಿರಿ.
- ಮೊದಲ ನೀಟ ಸಾಲಿನ ಮೂರು ಸಂಖ್ಯೆಗಳನ್ನು ಕೂಡಿಸಿದರೋ ?
- ಉತ್ತರಗಳಿಗೆ ಏನಾದರೂ ಪ್ರತ್ಯೇಕತೆಗಳಿವೆಯೇ ?
- ಉಳಿದ ಅಡ್ಡಸಾಲು ಮತ್ತು ನೀಟ ಸಾಲನ್ನು ಪರಿಶೋಧಿಸಿರಿ.
- ಎಲ್ಲಾ ಮೊತ್ತಗಳು ಒಂದೇ ಸಂಖ್ಯೆಯಾಗಿವೆಯೇ ?
- ಇದೇ ರೀತಿಯ ಕೋಣೆಗಳನ್ನು ಮಾಡುವಿರಾ ?

# 8

# ಟಿಕ್...ಟಿಕ್...ಟಿಕ್



## ಸರ್ಕಸ್ ಡೇರೆಯೆಡೆಗೆ




ಸರ್ಕಸ್ ಡೇರೆಯನ್ನು ಕಂಡಿರಲ್ಲವೇ ? ಪ್ರದರ್ಶನದ ಸಮಯಗಳನ್ನು ನೋಡಿರಿ...

- ರಜೆಯಲ್ಲದ ದಿನಗಳಲ್ಲಿ ಮೊದಲ ಪ್ರದರ್ಶನ ಆರಂಭವಾಗುವುದು ಎಷ್ಟು ಗಂಟೆಗೆ ?
- ರಜಾ ದಿನಗಳ ಪ್ರತ್ಯೇಕ ಪ್ರದರ್ಶನಗಳು ಯಾವ ಯಾವ ಸಮಯಗಳಲ್ಲಿ ನಡೆಯುವುದು ?
- ರಜಾ ದಿನಗಳಲ್ಲಿ ಎಷ್ಟು ಪ್ರದರ್ಶನಗಳಿರುತ್ತವೆ ?
- ರಜಾ ದಿನದ ಪ್ರದರ್ಶನ ಸಮಯಗಳನ್ನು ಅನುಕ್ರಮವಾಗಿ ಬರೆಯಿರಿ...

## ಸಮಯ ನೋಡಿ ಅಭಿನಯಿಸುವ

ಪ್ರತಿದಿನವೂ ನೀವು ಮಾಡುವ ಚಟುವಟಿಕೆಗಳು ಯಾವುವು ? ಆ ಚಟುವಟಿಕೆಗಳನ್ನು ಯಾವ ಸಮಯಗಳಲ್ಲಿ ಮಾಡುತ್ತೀರಿ ?

- ಬೆಳಿಗ್ಗೆ ಏಳುವುದು
- ಹಲ್ಲು ಉಜ್ಜುವುದು
- 
- ಶಾಲೆಗೆ ಹೋಗುವುದು
- 
- 
- 
- ರಾತ್ರಿ ಮಲಗುವುದು

ಕೆಳಗೆ ನೀಡಿರುವ ಸಮಯಗಳಲ್ಲಿ ನೀವು ಮಾಡುವ ಚಟುವಟಿಕೆಗಳನ್ನು ಅಭಿನಯಿಸಿ ತೋರಿಸಿರಿ...

- ಬೆಳಗ್ಗೆ 6 ಗಂಟೆ
- ಮಧ್ಯಾಹ್ನ 1 ಗಂಟೆ
- ಬೆಳಗ್ಗೆ 7 ಗಂಟೆ
- ಸಂಜೆ 4 ಗಂಟೆ
- ಬೆಳಗ್ಗೆ 10 ಗಂಟೆ
- ರಾತ್ರಿ 9 ಗಂಟೆ

## ಸಮಯ ಎಷ್ಟಾಯಿತು ?

ತನ್ವಿಯ ತರಗತಿ ಆರಂಭಗೊಂಡ ಸಮಯವನ್ನು ಗಡಿಯಾರದಲ್ಲಿ ನೀಡಲಾಗಿದೆ.

ಮಿನಿಟು ಮುಳ್ಳು 12 ರಲ್ಲಿಯೂ ಗಂಟೆ ಮುಳ್ಳು 10 ರಲ್ಲಿಯೂ ಇದೆ. ಸಮಯ 10 ಗಂಟೆ





## ಅಜ್ಜಿಯನ್ನು ನೋಡಲು




ತನ್ವಿ ಬೆಳಗ್ಗೆ ಬೇಗನೆ ಎದ್ದಳು.

ತನ್ವಿ ಎದ್ದ ಸಮಯ ________



## ಆಹಾರ ಸೇವಿಸುವಾಗ

ಈಗ ಸಮಯ ಎಷ್ಟು ?




## ಹೊರಡುವ






ತನ್ವಿ ಮನೆಯಿಂದ
ಹೊರಡುವ ಸಮಯ

## ಅಜ್ಜಿಯ ಮನೆಯಲ್ಲಿ

ತನ್ವಿ ಅಜ್ಜಿಯ ಮನೆಗೆ ತಲುಪಿದ ಸಮಯವನ್ನು ನೋಡಿರಿ...






ಸಮಯವನ್ನು ಬರೆಯಿರಿ...

............ ಗಂಟೆ ............ ಮಿನಿಟು




ಗಡಿಯಾರ ಮತ್ತು ಸಮಯವನ್ನು ನೋಡಿ ಪೂರ್ತಿ ಗೊಳಿಸಿರಿ.

1 2 3 4 5



| A | B | C | D | E |
|---|---|---|---|---|
| 3 ಗಂಟೆ | 11 ಗಂಟೆ | 7 ಗಂಟೆ | 10 ಗಂಟೆ | 5 ಗಂಟೆ |

1 - C   2 - ____   3 - ____   4 - ____   5 - ____

ಪಟ್ಟಿಯನ್ನು ಪೂರ್ತಿಗೊಳಿಸಿರಿ.

| | ಗಂಟೆ ಮುಳ್ಳು | ಮಿನಿಟು ಮುಳ್ಳು | ಸಮಯ |
|---|---|---|---|
|  | 11 ರ ನೇರ | 12 ರ ನೇರ | 11 ಗಂಟೆ |
|  | | | |
|  | | | |
|  | | | |

ಸಮಯ ನೋಡಿ ಮುಳ್ಳುಗಳನ್ನು ಚಿತ್ರಿಸಿರಿ.

6 ಗಂಟೆ



5:30



8 ಗಂಟೆ



1:30



## ಪಾರ್ಕ್

ತನ್ವಿ ಈಗ ಪಾರ್ಕಿನಲ್ಲಿದ್ದಾಳೆ.
ಸಮಯ ಎಷ್ಟಾಯಿತು ?

....... ಗಂಟೆ ....... ಮಿನಿಟು



ತನ್ವಿ ಪಾರ್ಕಿನಿಂದ ಹಿಂತಿರುಗುವ ಸಮಯವನ್ನು ಕೆಳಗಿನ ಗಡಿಯಾರದಲ್ಲಿ ನೀಡಲಾಗಿದೆ.



ಗಂಟೆ ಮುಳ್ಳು 6 ದಾಟಿಯೂ ಮಿನಿಟು ಮುಳ್ಳು 3 ರಲ್ಲಿಯೂ ಇದೆ.





ಸಮಯ 6 ಗಂಟೆ 15 ಮಿನಿಟು.



ಆರುಕಾಲು ಎಂದೂ ಹೇಳಬಹುದು.

ತನ್ವಿ ಪಾರ್ಕಿನಿಂದ ಅಜ್ಜಿಯ ಮನೆಗೆ ತಲುಪಿದ ಸಮಯವನ್ನು ನೋಡಿರಿ.



ಗಂಟೆ ಮುಳ್ಳು 6 ರಿಂದ 7 ರ ಹತ್ತಿರಕ್ಕೆ ತಲುಪಿದೆ.ಮಿನಿಟು ಮುಳ್ಳು 9 ರಲ್ಲಿ ಇದೆ.
ಸಮಯ ಎಷ್ಟಾಯಿತು ?
6 ಗಂಟೆ 45 ನಿಮಿಷ.




ಸಮಯ ನೋಡಿ ಮುಳ್ಳುಗಳನ್ನು ಚಿತ್ರಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

10:30



**ಹತ್ತುವರೆ**

10:45



**ಹತ್ತು ಮುಕ್ಕಾಲು**

11:15



**ಹನ್ನೊಂದು ಕಾಲು**

11:45



.................................

12:15



.................................

12:30



.................................

## ನನ್ನ ವಿದ್ಯಾಲಯ

ತನ್ವಿ ಮರುದಿನ ಶಾಲೆಗೆ ತಲುಪಿದಳು.

ಈಗ ಸಮಯ ........................ .




ಈ ಸಮಯವನ್ನು
ಗಡಿಯಾರದಲ್ಲಿ ಸೂಚಿಸಿರಿ.



ತನ್ವಿ ಶಾಲೆಗೆ ತಲುಪಿ ಅರ್ಧ ಗಂಟೆಯ ನಂತರ ತರಗತಿ ಆರಂಭವಾಯಿತು.

ತರಗತಿ ಆರಂಭವಾದ ಸಮಯ | .................... ಗಂಟೆ |

ಸಮಯವನ್ನು ಡಿಜಿಟಲ್ ರೀತಿಯಲ್ಲಿ ಬರೆಯಿರಿ...

ತರಗತಿ ಆರಂಭವಾಗಿ 15
ಮಿನಿಟಿನ ನಂತರದ ಸಮಯವನ್ನು
ಗಡಿಯಾರದಲ್ಲಿ ಚಿತ್ರಿಸಿರಿ.





## ಆದಿತ್ಯ

ತನ್ವಿ ಓದಿದ ವಾರ್ತೆಯನ್ನು ನೋಡಿರಿ...

ಸೂರ್ಯನ ಕುರಿತು ಅಧ್ಯಯನ ಮಾಡಲು ಐ.ಎಸ್.ಆರ್. ಒ ಉಡಾಯಿಸಿದ ಬಾಹ್ಯಾಕಾಶ ನೌಕೆಯೆ ಆದಿತ್ಯ L1

2023 ಸೆಪ್ಟೆಂಬರ್ 2 ರಂದು ಇದನ್ನು ಉಡಾಯಿಸಲಾಯಿತು.

ಈ ದಿನವನ್ನು ಕ್ಯಾಲೆಂಡರ್‌ನಲ್ಲಿ ಗುರುತಿಸಿರಿ.

ಸೆಪ್ಟೆಂಬರ್ 2023 SEPTEMBER

| ಆದಿತ್ಯ SUN | ಸೋಮ MON | ಮಂಗಳ TUE | ಬುಧ WED | ಗುರು THU | ಶುಕ್ರ FRI | ಶನಿ SAT |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

- ಸೆಪ್ಟೆಂಬರ್ 5 ರಿಂದ 23ರ ವರೆಗೆ ಎಷ್ಟು ದಿವಸಗಳಿವೆ ?

## ನಿನ್ನೆ... ಇಂದು... ನಾಳೆ...

ಇಂದಿನ ತಾರೀಕು

ತರಗತಿಯ ಕ್ಯಾಲೆಂಡರ್‌ನಲ್ಲಿ ಈ ತಾರೀಕನ್ನು ಗುರುತಿಸಿರಿ.

ಇದು ಯಾವ ತಿಂಗಳು ?

ಇಂದು ಯಾವ ದಿನ ?

ನಿನ್ನೆ ಯಾವ ದಿನವಾಗಿತ್ತು ?

ನಾಳೆ ಯಾವ ದಿನ ?

ಈ ತಿಂಗಳ ಒಂದನೇ ತಾರೀಕು ಯಾವ ದಿನವಾಗಿದೆ ?

ಈ ತಿಂಗಳ ಕೊನೆಯ ದಿನ ಯಾವುದು ?

## ಜನ್ಮದಿನ

ಈ ವರ್ಷದ ಕ್ಯಾಲೆಂಡರ್‌ನಲ್ಲಿ ನಿಮ್ಮ ಜನ್ಮದಿನವನ್ನು ಗುರುತಿಸಿರಿ...

ನಿಮ್ಮ ಮತ್ತು ನಿಮ್ಮ ಗೆಳೆಯರ ಜನ್ಮ ದಿನವನ್ನು ಕ್ಯಾಲೆಂಡರ್ ನೋಡಿ ಚಾರ್ಟಿನಲ್ಲಿ ಬರೆಯಿರಿ... ತರಗತಿಯಲ್ಲಿ ಪ್ರದರ್ಶಿಸಿರಿ...

## ಕ್ಯಾಲೆಂಡರ್ ನೋಡಿರಿ... ಉತ್ತರ ಕಂಡುಹಿಡಿಯಿರಿ.

- ವರ್ಷ ಆರಂಭವಾಗುವ ತಿಂಗಳು ಯಾವುದು ?
- ಈ ವರ್ಷ ಜನವರಿ 1 ಯಾವ ದಿನವಾಗಿದೆ ?
- ಜನವರಿ 31 ಯಾವ ದಿನವಾಗಿದೆ ?

## ಪೂರ್ತಿಗೊಳಿಸಿರಿ.

ಆದಿತ್ಯವಾರ, ಸೋಮವಾರ, ...................................., ....................................,

...................................., ...................................., ....................................,

- ಈ ವರ್ಷ ಅಗೋಸ್ತು 15 ಯಾವ ದಿನವಾಗಿದೆ ?
- ಡಿಸೆಂಬರ್ 22 ದೇಶಿಯ ಗಣಿತಶಾಸ್ತ್ರ ದಿನವಾಗಿದೆ. ಈ ದಿನವನ್ನು ಕ್ಯಾಲೆಂಡರ್ ನಲ್ಲಿ ಗುರುತಿಸಿರಿ.
- ತಿಂಗಳುಗಳ ಹೆಸರುಗಳನ್ನು ಕ್ರಮವಾಗಿ ಬರೆಯಿರಿ.

## ಮೌಲ್ಯಮಾಪನ ಚಟುವಟಿಕೆಗಳು

**1. ಗಡಿಯಾರ ಮತ್ತು ಮುಳ್ಳು**

ನೀಡಿರುವ ಸಮಯವನ್ನು ನೋಡಿರಿ... ಗಂಟೆ ಮುಳ್ಳು ಮತ್ತು ಮಿನಿಟು ಮುಳ್ಳನ್ನು ಗಡಿಯಾರದಲ್ಲಿ ರಚಿಸಿರಿ...



1:00 ಗಂಟೆ



9:45 ಗಂಟೆ



2:30 ಗಂಟೆ



9:15 ಗಂಟೆ

**2. ತಿಂಗಳುಗಳು**

ಪ್ರತಿಯೊಂದು ತಿಂಗಳಿನ ದಿನಗಳನ್ನು ನೋಡಿ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ...

- ಯಾವ ಯಾವ ತಿಂಗಳುಗಳಲ್ಲಿ 30 ದಿನಗಳು ಮಾತ್ರ ಇರುತ್ತವೆ ?

- 31 ದಿನಗಳಿರುವ ತಿಂಗಳುಗಳು ಯಾವುವು ?

**3. ಕ್ಯಾಲೆಂಡರ್ ನೋಡುವ**

ಕ್ಯಾಲೆಂಡರ್ ನೋಡಿರಿ...
ಉತ್ತರ ಬರೆಯಿರಿ...

**2025 ಜನವರಿ**

| ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|
| ★ | ★ | ★ | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | ★ |

- ಕೊಟ್ಟಿರುವುದು ಯಾವ ವರ್ಷದ ಕ್ಯಾಲೆಂಡರ್ ಆಗಿದೆ ?
- ತಿಂಗಳು ಯಾವುದು ?
- ಈ ತಿಂಗಳಲ್ಲಿ ಎಷ್ಟು ದಿನಗಳಿವೆ ?
- ಈ ತಿಂಗಳಿಗಿಂತ ನೇರ ಹಿಂದಿನ ತಿಂಗಳು ಯಾವುದು ?
- ಆ ತಿಂಗಳಿನ ಕೊನೆಯ ದಿನ ಯಾವುದು ?
- ಈ ತಿಂಗಳಿನ ಮೊದಲ ದಿನ ಯಾವುದು ?
- ಈ ತಿಂಗಳಲ್ಲಿ ಆದಿತ್ಯವಾರ ಬರುವ ತಾರೀಕುಗಳನ್ನು ಬರೆಯಿರಿ.
- 1, 8, 15, 22, 29 ಎಂಬೀ ತಾರೀಕುಗಳು ಬರುವ ದಿನಗಳು ಯಾವುವು ?
- ಮುಂದಿನ ತಿಂಗಳು ಯಾವುದು ?
- ಮುಂದಿನ ತಿಂಗಳ ಮೊದಲ ದಿನ ಯಾವುದು ?
- ನಾಡಿದ್ದು ಶನಿವಾರ ಆಗಿದ್ದರೆ, ನಿನ್ನೆ ಯಾವ ದಿನವಾಗಿತ್ತು ?
- ಗಣರಾಜ್ಯ ದಿನವನ್ನು ಕ್ಯಾಲೆಂಡರ್ ನಲ್ಲಿ ಗುರುತಿಸಿರಿ.

# 9

# ಆವರ್ತಿಸಿ ಕೂಡಿಸಿದಾಗ



• ಗೆರೆ ಎಳೆದು ಜೋಡಿಸಿರಿ...

| | |
|---|---|
| $3 \times 2$ | 10 |
| 16 | $4 \times 2$ |
| $5 \times 2$ | $7 \times 2$ |
| 8 | $6 \times 4$ |
| 14 | $8 \times 2$ |
| 18 | 9 |
| $3 \times 3$ | 6 |
| 24 | $9 \times 2$ |

ಅಡಗಿರುವವರು ಯಾರು ?



| | | | | |
|---|---|---|---|---|
| $8 \times 4$ | $5 \times 1$ | $6 \times 3$ | $1 \times 2$ | $6 \times 4$ |
| $4 \times 2$ | $7 \times 10$ | $6 \times 6$ | $9 \times 5$ | $9 \times 6$ |

- ಈ ಲೆಕ್ಕಗಳನ್ನು ಮಾಡಿರಿ.
- ಉತ್ತರವಾಗಿ ಬರುವ ಕೋಣೆಗಳಿಗೆ ಬಣ್ಣ ಹಚ್ಚಿರಿ.
- ಅಡಗಿರುವುದು ಯಾರೆಂದು ಕಂಡುಹಿಡಿಯಿರಿ.

## ಕಂಡುಹಿಡಿಯಬಹುದೇ ?

**ಮರಗಳೆಷ್ಟು... ಗಿಳಿಗಳೆಷ್ಟು...**

ಒಂದು ಮರದಲ್ಲಿ ಒಂದು ಗಿಳಿಯಂತೆ ಕುಳಿತುಕೊಂಡರೆ ಒಂದು ಗಿಳಿ ಬಾಕಿ ಉಳಿಯುವುದು. ಒಂದು ಮರದಲ್ಲಿ 2 ಗಿಳಿಗಳಂತೆ ಕುಳಿತರೆ ಒಂದು ಮರ ಬಾಕಿ ಉಳಿಯುವುದು. ಹಾಗಾದರೆ ಮರವೆಷ್ಟು ? ಗಿಳಿಯೆಷ್ಟು ?





**ನಾವೆಷ್ಟು ?**

ನಾವು 2 ರಂತೆ ಗುಂಪುಗಳಾಗಬಲ್ಲೆವು. 3 ರಂತೆಯೂ ಗುಂಪುಗಳಾಗಬಲ್ಲೆವು. 10 ಕ್ಕಿಂತ ಕಡಿಮೆಯಾದ ಸಂಖ್ಯೆ. ನಾವೆಷ್ಟು ಮಂದಿ ?

## ಪಾಯಸ ವಿತರಣೆ

ಇಂದು ಮಿನ್ನುವಿನ ಹುಟ್ಟುಹಬ್ಬ. ಮೂರನೇ ತರಗತಿಗೆ 4 ಟ್ರೇಗಳಲ್ಲಿ ಪಾಯಸ ತಂದಳು. ಒಂದು ಟ್ರೇ ಯಲ್ಲಿ 7 ಕಪ್ ಪಾಯಸವಿದೆ.



ಎಷ್ಟು ಮಕ್ಕಳಿಗೆ ಪಾಯಸ ವಿತರಿಸಬಹುದು ?

....... + ....... + ....... + ....... = 4 × ....... = .......

ಇನ್ನೂ ಎರಡು ಟ್ರೇಗಳಲ್ಲಿ ಪಾಯಸ ತಂದಾಗ 2 ಕಪ್ ಪಾಯಸ ಬಾಕಿ ಉಳಿಯಿತು. ಮೂರನೇ ತರಗತಿಯಲ್ಲಿ ಒಟ್ಟು ಎಷ್ಟು ಮಕ್ಕಳಿಗೆ ಪಾಯಸ ವಿತರಿಸಲಾಯಿತು ?

ನಾನು ಲೆಕ್ಕಮಾಡಿದ ರೀತಿ:

ಇನ್ನೊಂದು ರೀತಿ:

**ಪೂರ್ತಿಗೊಳಿಸಿರಿ**

3 × 7 = 21
4 × 7 = 28
- - - - - -
6 × 7 = - -
- - - - - -
- - - - - -
- - - - - -
10 × 7 = - -

ಎಷ್ಟು ಟ್ರೇಗಳಲ್ಲಿ ಪಾಯಸ ತರಲಾಯಿತು ?

ಒಂದು ಟ್ರೇಯಲ್ಲಿ ಎಷ್ಟು ಕಪ್ ಪಾಯಸವಿದೆ ?

ಒಟ್ಟು ಎಷ್ಟು ಕಪ್ ಪಾಯಸವಿದೆ ?

ಮೂರನೇ ತರಗತಿಯ ಮಕ್ಕಳ ಸಂಖ್ಯೆ ?

## ಎರಡನೇ ತರಗತಿಗೆ

ಎರಡನೇ ತರಗತಿಯ ಮಕ್ಕಳಿಗೆ ನೀಡಲು
10 ಟ್ರೇ ಪಾಯಸ ಬೇಕಾಯಿತು.

ಎರಡನೇ ತರಗತಿಯಲ್ಲಿ ಎಷ್ಟು ಮಕ್ಕಳಿದ್ದಾರೆ ?

ನಾನು ಲೆಕ್ಕಮಾಡಿದ ರೀತಿ.

**ವಾರದ ಹಾಡು**

ದಿನಗಳೇಳು ಸೇರಿದರೆ
ವಾರವು ಒಂದು ಜನಿಸುವುದು
ವಾರಗಳೆರಡು ಸೇರಿದರೆ
ದಿನಗಳೆಷ್ಟು ಹೇಳುವಿರಾ ?
ಹೇಳುವೆವು ನಾವು ಹೇಳುವೆವು
ದಿನಗಳ ಸಂಖ್ಯೆ ಹದಿನಾಲ್ಕು.

- - - - - - - - - - - - - - - - - - - -

- - - - - - - - - - - - - - - - - - - -

- - - - - - - - - - - - - - - - - - - -






7 ಕಪ್‌ಗಳಂತೆ 4 ಬಾರಿ
$4 \times 7 = 28$



4 ಕಪ್‌ಗಳಂತೆ 7 ಬಾರಿ
$7 \times 4 = 28$

## ತಣಲ್ ಕುಟುಂಬ ಶ್ರೀ




ತಣಲ್ ಕುಟುಂಬ ಶ್ರೀ ಯೂನಿಟ್‌ನವರು ಕೊಡೆಗಳನ್ನು ತಯಾರಿಸುತ್ತಿದ್ದಾರೆ. ಮಿನ್ನುವಿನ ಅಮ್ಮ ಈ ಯೂನಿಟಿನ ಸದಸ್ಯೆ. ಅವರಿಗೆ 11 ಕೊಡೆಗೆ ಒಂದು ಓರ್ಡರ್ ಲಭಿಸಿತು.
3 ಕೊಡೆ ತಯಾರಿಸಲು ಬೇಕಾದ ಕೊಡೆಕಡ್ಡಿಗಳು ಮನೆಯಲ್ಲಿವೆ. ಒಂದು ಕೊಡೆ ತಯಾರಿಸಲು 8 ಕೊಡೆಕಡ್ಡಿಗಳ ಅಗತ್ಯವಿದೆ. ಹಾಗಾದರೆ ಮನೆಯಲ್ಲಿ ಒಟ್ಟು ಎಷ್ಟು ಕೊಡೆಕಡ್ಡಿಗಳಿವೆ ?

....... + ....... + ....... = ....... × ....... = .......

ಬಾಕಿ 8 ಕೊಡೆ ತಯಾರಿಸಲು ಅಗತ್ಯವಾದ ಕೊಡೆಕಡ್ಡಿಗಳನ್ನು ಖರೀದಿಸಲು ಅಮ್ಮನ ಜೊತೆ ಮಿನ್ನು ಹೋದಳು. ಎಷ್ಟು ಕೊಡೆಕಡ್ಡಿಗಳನ್ನು ಖರೀದಿಸಬೇಕು ?

11 ಕೊಡೆಗಳಿಗೆ ಒಟ್ಟು ಎಷ್ಟು ಕೊಡೆಕಡ್ಡಿಗಳು ಬೇಕು ?

ನಾನು ಲೆಕ್ಕಮಾಡಿದ ರೀತಿ:

ಗೆಳೆಯರು ಲೆಕ್ಕಮಾಡಿದ ರೀತಿ:

## ಲೆಕ್ಕಮಾಡಿ ಉತ್ತರವನ್ನು ನೋಟ್ ಪುಸ್ತಕದಲ್ಲಿ ಬರೆಯಿರಿ...

- ಒಂದು ಪ್ಯಾಕೆಟ್ ಕ್ರಯೋನ್‌ನ ಬೆಲೆ 8 ರೂಪಾಯಿ. ಇಂತಹ 6 ಪ್ಯಾಕೆಟ್ ಕ್ರಯೋನ್ ಖರೀದಿಸಲು ಎಷ್ಟು ರೂಪಾಯಿ ಬೇಕು ?
- ಮಿನ್ನುವಿನ ಶಾಲೆಗೆ 8 ಪೇಪರ್ ಕಟ್ಟರ್ ಅಗತ್ಯವಿದೆ. ಒಂದರ ಬೆಲೆ 7 ರೂಪಾಯಿ. ಹಾಗಾದರೆ ಒಟ್ಟು ಎಷ್ಟು ರೂಪಾಯಿ ಬೇಕು ?
- ಒಂದು ಕೇಕನ್ನು ಎಂಟು ತುಂಡುಗಳಾಗಿ ಮಾಡಬಹುದು.
  5 ಕೇಕ್ ಖರೀದಿಸಿ ತುಂಡುಗಳನ್ನಾಗಿ ಮಾಡಲಾಯಿತು.
  ಎಷ್ಟು ಕೇಕ್ ತುಂಡುಗಳು ಸಿಗಬಹುದು ?



- 127ನೇ ಪುಟದಲ್ಲಿರುವ ಚೆಸ್ ಬೋರ್ಡಿನ ಚಿತ್ರ ನೋಡಿದಿರಲ್ಲವೇ ? ಚೆಸ್ ಬೋರ್ಡಿನ ಎಷ್ಟು ಕೋಣೆಗಳಲ್ಲಿ ಕಾಯಿನ್‌ಗಳಿವೆ ?
  ಚೆಸ್ ಬೋರ್ಡಿನಲ್ಲಿ ಒಟ್ಟು ಎಷ್ಟು ಕೋಣೆಗಳಿವೆ ?
- ಚೈನಾದಿಂದ ವಿಳಿಞಂ ಬಂದರಿಗೆ ಕ್ರೇನ್‌ಗಳನ್ನು ತರುವ ಹಡಗಿಗೆ ಸಂಚರಿಸಲು 3 ವಾರಗಳು ಬೇಕಾದುವು. ಹಾಗಾದರೆ ಹಡಗು ಸಂಚರಿಸಿದ ದಿನಗಳು ಎಷ್ಟು ?

- ಪೂರ್ತಿಗೊಳಿಸಿರಿ.

| | | | | | | | | | |
|---|---|---|---|---|---|---|---|---|---|
| 1 | 2 | 3 | 4 | | 6 | 7 | | 9 | 10 |
| 8 | 16 | | | 40 | | | 64 | | |

| | | | | | | | | | |
|---|---|---|---|---|---|---|---|---|---|
| 1 | 2 | 3 | 4 | 5 | | | 8 | 9 | 10 |
| 7 | | | | | 42 | 49 | | | |

## ಸಮೋಸ ವ್ಯಾಪಾರ

ಕೊಡೆ ತಯಾರಿಸುವವರಿಗೆ ಸಮೋಸ ಖರೀದಿಸಲು ಮಿನ್ನುವಿನ ತಂದೆ ಮತ್ತು ತಮ್ಮ ಅಂಗಡಿಗೆ ತಲುಪಿದರು.

ಒಂದು ಸಮೋಸಕ್ಕೆ 9 ರೂಪಾಯಿ ಬೆಲೆ. ತಂದೆಯು 8 ಸಮೋಸಗಳನ್ನು ಖರೀದಿಸಿದರು. ಹಾಗಾದರೆ ಅಂಗಡಿಯವನಿಗೆ ಎಷ್ಟು ರೂಪಾಯಿ ಕೊಡಬೇಕು ?

ನಾನು ಲೆಕ್ಕಮಾಡಿದ ರೀತಿ.




| | |
|---|---|
| ಎರಡು ಸಲ 9 ಸೇರಿದರೆ | $2 \times 9 = 18$ |
| ನಾಲ್ಕು ಸಲ 9 ಸೇರಿದರೆ | |
| ಆರು ಸಲ 9 ಸೇರಿದರೆ | |
| | $8 \times 9 =$ ............ |
| | $10 \times 9 = 90$ |
| | $50 \times 9 =$ ............ |
| | $100 \times 9 =$ ............ |

$3 \times 9 =$ ........
$5 \times 9 =$ ........
$7 \times 9 =$ ........
$9 \times 9 =$ ........

## ಗುಣಿಸಿ ಆಡುವ

| | | | | | | | | | |
|---|---|---|---|---|---|---|---|---|---|
| 1 × 1 | 2 × 1 | 3 × 1 | 4 × 1 | 5 × 1 | 6 × 1 | 7 × 1 | 8 × 1 | 9 × 1 | 10 × 1 |
| 1 × 2 | 2 × 2 | 3 × 2 | 4 × 2 | 5 × 2 | 6 × 2 | 7 × 2 | 8 × 2 | 9 × 2 | |
| 1 × 3 | 2 × 3 | 3 × 3 | 4 × 3 | 5 × 3 | 6 × 3 | 7 × 3 | 8 × 3 | | |
| 1 × 4 | 2 × 4 | 3 × 4 | 4 × 4 | 5 × 4 | 6 × 4 | 7 × 4 | | | |
| 1 × 5 | 2 × 5 | 3 × 5 | 4 × 5 | 5 × 5 | 6 × 5 | | | | |
| 1 × 6 | 2 × 6 | 3 × 6 | 4 × 6 | 5 × 6 | | | | | |
| 1 × 7 | 2 × 7 | 3 × 7 | 4 × 7 | | | | | | |
| 1 × 8 | 2 × 8 | 3 × 8 | | | | | | | |
| 1 × 9 | 2 × 9 | | | | | | | | |
| 1 × 10 | 2 × 10 | 3 × 10 | 4 × 10 | 5 × 10 | 6 × 10 | 7 × 10 | 8 × 10 | 9 × 10 | 10×10 |

ಈ ಕ್ರಿಯೆಗಳ ಉತ್ತರವನ್ನು ನೋಟು ಪುಸ್ತಕದಲ್ಲಿ ಪಟ್ಟಿ ಮಾಡಿ ಬರೆಯಿರಿ.

- ಬಣ್ಣ ಹಚ್ಚಿರುವ ಕೋಣೆಗಳ ಉತ್ತರ ಲೆಕ್ಕ ಮಾಡಿ ಬರೆಯಿರಿ.

- ಎಂಟನೇ ಅಡ್ಡ ಸಾಲಿನ ಉತ್ತರಗಳನ್ನು ಬರೆಯಿರಿ. ಅವುಗಳ ವಿಶೇಷತೆ ಏನು ?

## ಸ್ವಿಚ್ ಆನ್ ಮಾಡಿ... ಬಲ್ಬ್ ಉರಿಸಿ...

ಮಿನ್ನು ಗಣಿತ ಮೇಳಕ್ಕಾಗಿ ಮಾಡಿದ್ದನ್ನು ನೋಡಿರಿ...

ಸ್ವಿಚ್‌ನ ಕೆಳಗಿರುವ ಕ್ರಿಯೆಯ ಉತ್ತರವಾಗಿ ಬರುವ ಬಲ್ಬುಗಳಿಗೆ ಸ್ವಿಚ್‌ನ ಬಣ್ಣವನ್ನು ಹಚ್ಚಿರಿ.

ಸ್ವಿಚ್ ಮತ್ತು ಬಲ್ಬ್‌ನ್ನು ಗೆರೆ ಎಳೆದು ಜೋಡಿಸಿರಿ.




## ಕ್ರಿಕೆಟ್ ಪಂದ್ಯಾಟ

- ಕ್ರಿಕೆಟ್ ಪಂದ್ಯಾಟದಲ್ಲಿ ಮಿನ್ನುವಿನ ಅಕ್ಕ 11 ಸಿಕ್ಸರ್ (6 ರನ್) ಮತ್ತು 15 ಬೌಂಡರಿಯನ್ನು (4 ರನ್) ಬಾರಿಸಿದಳು.

  ಒಟ್ಟು ಎಷ್ಟು ರನ್‌ಗಳು ಲಭಿಸಿವೆ ? ______

| | | | |
|---|---|---|---|
| 15 × 1 | = | 15 |
| 15 × 2 | = | 30 |
| 15 × 3 | = | 45 |
| 15 × 4 | = | 60 |
| 15 × 5 | = | 75 |

ನಾನು ಲೆಕ್ಕ ಮಾಡಿದ ರೀತಿ:

| ಸಿಕ್ಸರ್‌ಗಳಿಂದ ಲಭಿಸಿದ ರನ್‌ಗಳು | ಬೌಂಡರಿಗಳಿಂದ ಲಭಿಸಿದ ರನ್ಸ್‌ಗಳು |
|---|---|
| 10 ಸಲ 6 = 60 | ...... ಸಲ 4 = ...... |
| 1 ಸಲ 6 = 6 | ........................... = ...... |
| 11 ಸಲ 6 = 66 | ........................... = ...... |

ಒಟ್ಟು ರನ್‌ಗಳು = 66 + 60 = 126

**ಗುಣಿಸದೆ ಲೆಕ್ಕ ಮಾಡುವ**

| | | |
|---|---|---|
| 29 × 8 | = | |
| 30 × 8 | = | 240 |
| 31 × 8 | = | |

| | | |
|---|---|---|
| 50 × 5 | = | |
| 51 × 5 | = | 255 |
| 52 × 5 | = | |

## ಬಳೆಯ ಬೆಲೆ

ಒಂದು ಡಜನ್ ಬಳೆಯ ಬೆಲೆ 25 ರೂಪಾಯಿಗಳಾಗಿವೆ. ಮಿನ್ನು 4 ಡಜನ್ ಕೆಂಪು ಬಳೆಯನ್ನು ಮತ್ತು 3 ಡಜನ್ ನೀಲಿ ಬಳೆಯನ್ನು ಖರೀದಿಸಿದಳು. ಒಟ್ಟು ಬೆಲೆ ಎಷ್ಟು ?

ನಾನು ಲೆಕ್ಕಮಾಡಿದ ರೀತಿ. ಇನ್ನೊಂದು ರೀತಿ.




ಪಟ್ಟಿ ಪೂರ್ತಿಗೊಳಿಸಿರಿ.

| | |
|---|---|
| $1 \times 6 = 6$ | $10 \times 6 = 60$ |
| $2 \times 6 = 12$ | $20 \times 6 = 120$ |
| ......... = ..... | ......... = ..... |
| ......... = ..... | ......... = ..... |
| ......... = ..... | ......... = ..... |
| ......... = ..... | ......... = ..... |
| ......... = ..... | ......... = ..... |
| ......... = ..... | ......... = ..... |
| ......... = ..... | ......... = ..... |

$44 \times 6$
ಬಾಯಿಲೆಕ್ಕವಾಗಿ ಉತ್ತರ ಕಂಡುಹಿಡಿಯಬಹುದೇ ?

$40 \times 6$ = .......
$4 \times 6$ = .......

$44 \times 6$ = .......

- ಇದೇ ರೀತಿ 7, 8, 9 ಎಂಬೀ ಅಂಕೆಗಳ ಗುಣಾಕಾರ ಕ್ರಿಯೆಗಳನ್ನು ಬರೆಯಿರಿ...

- ಬಾಯಿಲೆಕ್ಕವಾಗಿ ಮಾಡಿ...

$110 \times 6$ $52 \times 6$ $38 \times 6$

- ಇನ್ನಷ್ಟು ಪ್ರಶ್ನೆಗಳನ್ನು ತಯಾರಿಸಿರಿ. ಬಾಯಿಲೆಕ್ಕವಾಗಿ ಮಾಡಿರಿ...

## ಪೂವಲಿ ಪೂರ್ತಿಗೊಳಿಸಿರಿ...




## ನಮೂನೆ ಮುಂದುವರಿಸಿರಿ...

1. 3, 6, 9, ......, ......, ......
2. 4, 8, ......, ......, 20, 24, ......
3. 27, 36, 45, ......, ......, ......
4. 45, 40, 35, ......, ......, ......
5. 15, 30, 45, ......, ......, ......
6. 25, 50, 75, ......, ......, ......
7. 100, 200, 300, 400, ......, ......, ......

ನಾನು ಕಂಡುಹಿಡಿದ ನಮೂನೆ.

1. ............., ............., ............., .............
2. ............., ............., ............., .............
3. ............., ............., ............., .............
4. ............., ............., ............., .............

## ಗಣಿತ ಮೇಳ

ಮಿನ್ನುವಿನ ಶಾಲೆಯಲ್ಲಿ ಗಣಿತಮೇಳದ ಅಂಗವಾಗಿ ಆಯೋಜಿಸಿದ ಸ್ಪರ್ಧೆಯಲ್ಲಿ 6 ಮಕ್ಕಳು ಗೆದ್ದರು. ಅವರಿಗೆ ಬಹುಮಾನವಾಗಿ ಪುಸ್ತಕ ನೀಡಿದರು.

- ಒಂದು ಪುಸ್ತಕದ ಬೆಲೆ 100 ರೂಪಾಯಿ.
- 6 ಪುಸ್ತಕ ಖರೀದಿಸಿದಾಗ ಒಂದು ಪುಸ್ತಕಕ್ಕೆ 5 ರೂಪಾಯಿಯಂತೆ ಕಡಿಮೆ ಮಾಡಿದರು. ಅಂಗಡಿಯವನಿಗೆ ಒಟ್ಟು ಎಷ್ಟು ರೂಪಾಯಿ ಕೊಟ್ಟರು ?

ನಾನು ಲೆಕ್ಕಮಾಡಿದ ರೀತಿ.

ಗೆಳೆಯರು ಲೆಕ್ಕಮಾಡಿದ ರೀತಿ.

ಒಂದು ಪುಸ್ತಕಕ್ಕೆ ನೀಡಿದ ಬೆಲೆ

ಪುಸ್ತಕಗಳ ಸಂಖ್ಯೆ

ಒಟ್ಟು ಬೆಲೆ

- ಪುಸ್ತಕದ ಖರೀದಿಸಲು ಮಿನ್ನುವು ಅಂಗಡಿಯವನಿಗೆ ಯಾವ ಯಾವ ನೋಟುಗಳನ್ನು ನೀಡಿರಬಹುದು ?

| ನೋಟುಗಳು | ಸಂಖ್ಯೆ | ಮೊತ್ತ |
|---|---|---|
| 500 ರೂಪಾಯಿ | 1 | |
| 200 ರೂಪಾಯಿ | | |
| 100 ರೂಪಾಯಿ | | |
| 50 ರೂಪಾಯಿ | 1 | |
| 20 ರೂಪಾಯಿ | | |
| 10 ರೂಪಾಯಿ | 2 | |
| 5 ರೂಪಾಯಿ | | |
| ಒಟ್ಟು | | |

ಇನ್ನೊಂದು ರೀತಿ:

| ನೋಟುಗಳು | ಸಂಖ್ಯೆ | ಮೊತ್ತ |
|---|---|---|
| 500 ರೂಪಾಯಿ | | |
| 200 ರೂಪಾಯಿ | | |
| 100 ರೂಪಾಯಿ | | |
| 50 ರೂಪಾಯಿ | | |
| 20 ರೂಪಾಯಿ | | |
| 10 ರೂಪಾಯಿ | | |
| 5 ರೂಪಾಯಿ | | |
| ಒಟ್ಟು | | |

- ಅಂಗಡಿಯವನಿಗೆ 10 ನೋಟುಗಳನ್ನು ಕೊಡಲಾಯಿತು.

ಯಾವ ಯಾವ ನೋಟುಗಳನ್ನು ಕೊಟ್ಟಿರಬಹುದು ?

| ನೋಟುಗಳು | ಸಂಖ್ಯೆ | ಮೊತ್ತ |
|---|---|---|
| 500 ರೂಪಾಯಿ | | |
| 200 ರೂಪಾಯಿ | | |
| 100 ರೂಪಾಯಿ | | |
| 50 ರೂಪಾಯಿ | | |
| 20 ರೂಪಾಯಿ | | |
| 10 ರೂಪಾಯಿ | | |
| 5 ರೂಪಾಯಿ | | |
| ಒಟ್ಟು | | |

| ನೋಟುಗಳು | ಸಂಖ್ಯೆ | ಮೊತ್ತ |
|---|---|---|
| 500 ರೂಪಾಯಿ | | |
| 200 ರೂಪಾಯಿ | | |
| 100 ರೂಪಾಯಿ | | |
| 50 ರೂಪಾಯಿ | | |
| 20 ರೂಪಾಯಿ | | |
| 10 ರೂಪಾಯಿ | | |
| 5 ರೂಪಾಯಿ | | |
| ಒಟ್ಟು | | |

ಎಲ್ಲರ ಉತ್ತರ ಇದೇ ಆಗಿದೆಯೇ ?

## ಕ್ರಿಸ್ಮಸ್ ಟ್ರೀ



ಮಿನ್ನು ಕ್ರಿಸ್ಮಸ್ ಟ್ರೀ ಸಜ್ಜುಗೊಳಿಸುವುದಕ್ಕಾಗಿ 3 ಸೆಟ್ ಅಲಂಕಾರಿಕ ವಸ್ತುಗಳನ್ನು ಖರೀದಿಸಿದಳು. ಒಂದು ಸೆಟ್‌ನ ಬೆಲೆ 98 ರೂಪಾಯಿ.
ಒಟ್ಟು ಎಷ್ಟು ರೂಪಾಯಿ ಆಯಿತು ?

ನಾನು ಲೆಕ್ಕಮಾಡಿದ ರೀತಿ:

ಇನ್ನೊಂದು ರೀತಿ:

## ಮೌಲ್ಯಮಾಪನ ಚಟುವಟಿಕೆಗಳು

**1. ಫುಟ್ಬಾಲ್ ಸ್ಟೇಡಿಯಂ**

ಫುಟ್ಬಾಲ್ ಪಂದ್ಯ ನಡೆಯುವ ಸ್ಟೇಡಿಯಂನ ಒಂದು ಸಾಲಿನಲ್ಲಿ 99 ಮಂದಿಗೆ ಕುಳಿತುಕೊಳ್ಳಬಹುದು. ಸ್ಟೇಡಿಯಂನಲ್ಲಿ 10 ಸಾಲುಗಳಿವೆ. ಒಟ್ಟು ಎಷ್ಟು ಮಂದಿಗೆ ಕುಳಿತುಕೊಳ್ಳಬಹುದು ?

* ಒಂದು ಸಾಲಿನಲ್ಲಿ 100 ಆಸನಗಳಿರುತ್ತಿದ್ದರೆ ಎಷ್ಟು ಮಂದಿಗೆ ಕುಳಿತುಕೊಳ್ಳಬಹುದಾಗಿತ್ತು ?
* ಸ್ಟೇಡಿಯಂಗೆ ಇನ್ನೊಂದು ಗೇಟ್ ಮಾಡಲು ಪ್ರತಿಯೊಂದು ಸಾಲಿನಿಂದ 4 ರಂತೆ ಆಸನಗಳನ್ನು ತೆಗೆದರೆ ಬಾಕಿ ಉಳಿಯುವ ಆಸನಗಳು ಎಷ್ಟು ?

**2. ತಾರೀಕು ಎಷ್ಟು ?**

2024 ಅಕ್ಟೋಬರ್ ತಿಂಗಳ ಮೊದಲ ಸೋಮವಾರ ತಾರೀಕು 7 ಆಗಿದೆ. ನಾಲ್ಕನೇ ಸೋಮವಾರದ ತಾರೀಕು ಯಾವುದಾಗಿರಬಹುದು ?




**3. ಬಾಳೆ ಎಷ್ಟು ?**

ಮಿನ್ನು ತನ್ನ ಬಾಳೆ ತೋಟದಲ್ಲಿ ಒಂದು ಸಾಲಿನಲ್ಲಿ 7 ಬಾಳೆ ಗಿಡಗಳನ್ನು ನೆಟ್ಟಳು. ಈ ರೀತಿ 8 ಸಾಲುಗಳಲ್ಲಿ ಎಷ್ಟು ಬಾಳೆ ಗಿಡಗಳನ್ನು ನೆಡಬಹುದು ? ಒಂದು ಸಾಲಿನಲ್ಲಿ 9 ಬಾಳೆ ಗಿಡಗಳಂತೆ ಒಟ್ಟು ಎಷ್ಟು ಬಾಳೆ ಗಿಡಗಳನ್ನು ನೆಡಬಹುದು ?

## 4. ಗಣಿತ ರಸಪ್ರಶ್ನೆ

ಮಿನ್ನುವಿನ ಶಾಲೆಯ ಈ ತಿಂಗಳ ಗಣಿತ ರಸಪ್ರಶ್ನೆಯಲ್ಲಿ 8 ಮಂದಿ ಗೆದ್ದರು. ಅವರಿಗೆ ಬಹುಮಾನವಾಗಿ ಕಲಿಕೋಪಕರಣಗಳ ಕಿಟ್ ನೀಡಲು ತೀರ್ಮಾನಿಸಲಾಯಿತು. ಕಿಟ್‌ನಲ್ಲಿದ್ದ 6 ಬಗೆಯ ವಸ್ತುಗಳಿಗೆ ಮಿಕ್ಕಿ ಸ್ಟೋರ್ ಮತ್ತು ಡೋರ ಸ್ಟೋರ್‌ನ ಬೆಲೆಯನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ಮಿಕ್ಕಿ ಸ್ಟೋರ್ | ಡೋರ ಸ್ಟೋರ್ |
|---|---|
| ಪೆನ್ಸಿಲ್ 5 ರೂಪಾಯಿ | ಪೆನ್ಸಿಲ್ 4 ರೂಪಾಯಿ |
| ಪೆನ್ನು 8 ರೂಪಾಯಿ | ಪೆನ್ನು 10 ರೂಪಾಯಿ |
| ರಬ್ಬರ್ 3 ರೂಪಾಯಿ | ರಬ್ಬರ್ 3 ರೂಪಾಯಿ |
| ಸ್ಕೇಲ್ 7 ರೂಪಾಯಿ | ಸ್ಕೇಲ್ 9 ರೂಪಾಯಿ |
| ಸ್ಕೆಚ್ ಪೆನ್ನು ಪ್ಯಾಕೆಟ್ 30 ರೂಪಾಯಿ | ಸ್ಕೆಚ್ ಪೆನ್ನು ಪ್ಯಾಕೆಟ್ 27 ರೂಪಾಯಿ |
| ಕ್ರಯೋನ್ ಪ್ಯಾಕೆಟ್ 10 ರೂಪಾಯಿ | ಕ್ರಯೋನ್ ಪ್ಯಾಕೆಟ್ 8 ರೂಪಾಯಿ |

* ಯಾವ ಅಂಗಡಿಯಿಂದ ಬಹುಮಾನಗಳನ್ನು ಖರೀದಿಸುವುದು ಲಾಭ ?
* 8 ಮಂದಿಗಿರುವ ಬಹುಮಾನಗಳನ್ನು ಡೋರ ಸ್ಟೋರ್‌ನಿಂದ ಖರೀದಿಸಿದರೆ ಎಷ್ಟು ರೂಪಾಯಿ ನೀಡಬೇಕು ?
* ಮಿಕ್ಕಿ ಸ್ಟೋರ್‌ನಿಂದ ಆದರೋ ?
* ಬೆಲೆ ವಿವರ ಪಟ್ಟಿ ನೋಡಿ ಎರಡೂ ಅಂಗಡಿಗಳಿಂದ ಸಾಮಗ್ರಿಗಳನ್ನು ಖರೀದಿಸಲಾಯಿತು. ಖರೀದಿಸಿದ ಸಾಮಗ್ರಿಗಳ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಸಾಮಗ್ರಿಗಳು | ಬೆಲೆ |
|---|---|
| | |
| ಒಟ್ಟು | |

* 8 ಕಿಟ್‌ಗಳಿಗಾಗಿ ಒಟ್ಟು ಎಷ್ಟು ರೂಪಾಯಿ ಖರ್ಚಾಯಿತು ?

**5. ಕೋಣೆಗಳನ್ನು ಪೂರ್ತಿಗೊಳಿಸುವ**

- ಖಾಲಿಬಿಟ್ಟಿರುವ ಕೋಣೆಗಳನ್ನು ಪೂರ್ತಿಗೊಳಿಸಬೇಕು.
- ಅಡ್ಡಕ್ಕೂ ನೀಟಕ್ಕೂ ಗುಣಿಸಬೇಕು.

| | | | | |
|---|---|---|---|---|
| 2 | × | 3 | = | ....... |
| × | | × | | × |
| 1 | × | 3 | = | ....... |
| = | | = | | = |
| ....... | × | ....... | = | 18 |

| | | | | |
|---|---|---|---|---|
| ....... | × | ....... | = | ....... |
| × | | ....... | | × |
| ....... | × | ....... | = | ....... |
| = | | ....... | | = |
| ....... | × | ....... | = | 24 |

## 6. ಬಹುಮಾನ ಗಳಿಸುವ

ಮಿನ್ನುವನ್ನು ಬಹುಮಾನದ ಬಳಿಗೆ ತಲುಪಿಸಿರಿ.



| | | | | |
|---|---|---|---|---|
| 33 | 34 | 38 | 46 | 48 |
| 32 | 30 | 36 | 42 | 49 |
| 24 | 16 | 17 | 9 | 10 |
| 20 | 18 | 12 | 14 | 8 |
| 11 | 13 | 15 | 6 | 3 |






# 10

# ಪಾಲು ಮಾಡುವ



100
99 (9 ÷ 3)
98
97
96
95 (95 – 55)
94
93
92
91
81
82
83
84 (84 + 12)
85
86
87
88
89
90
80
79
78 (78 + 10)
77
76
75
74
73
72 (72 ÷ 8)
71
61
62
63
64 (64 – 4)
65
66 (66 + 14)
67
68
69
70
60
59
58
57
56
55
54
53
52
51
41
42 (9 × 9)
43
44 (44 + 44)
45 (45 – 3)
46
47
48 (48 – 20)
49
50
40
39
38
37
36
35 (35 ÷ 5)
34
33
32
31
21
22
23
24
25
26 (6 × 6)
27
28
29
30 (30 ÷ 3)
20
19
18
17
16
15
14 (14 + 6)
13
12
11
1
2 (6 × 4)
3
4
5 (8 × 7)
6
7
8
9 (9 + 9)
10

## ಒಂದಾಗುವ ಗೆಳೆಯರೇ...

ನಾವು 'ಒಂದಾಗುವ ಗೆಳೆಯರೇ' ಎಂಬ ಆಟ ಆಡುವ.



ಅಜಿಲ್‌ನ ತರಗತಿಯ 20 ಮಕ್ಕಳು ಈ ಆಟ ಆಡಿದರು.

- 5 ಮಂದಿ ಎಂದು ಹೇಳುವಾಗ ಎಷ್ಟು ಗುಂಪುಗಳಾದರು ?

| | |
|---|---|
| | $4 \times 5 = 20$ |

- 4 ಮಂದಿ ಎಂದು ಹೇಳುವಾಗ ಎಷ್ಟು ಗುಂಪುಗಳಾದರು ?

| | |
|---|---|
| | $5 \times 4 = 20$ |

20 ರಲ್ಲಿ
5 ರ
4 ಗುಂಪುಗಳು



- 2 ಮಂದಿಯಂತೆ ಗುಂಪುಗಳಾದರೋ ?

| | |
|---|---|
| | $10 \times 2 = 20$ |

- ಯಾವ ಸಂಖ್ಯೆಯನ್ನು ಹೇಳಿದಾಗ ಅತಿ ಹೆಚ್ಚು ಗುಂಪುಗಳಾದುವು ?

ಎಷ್ಟು ಗುಂಪುಗಳು ?

- 10 ಎಂದು ಹೇಳಿದಾಗಲೋ ?

$2 \times 10 = 20$

| ಒಟ್ಟು ಮಕ್ಕಳು | ಒಂದು ಗುಂಪಿನ ಮಕ್ಕಳ ಸಂಖ್ಯೆ | ಗುಂಪುಗಳ ಸಂಖ್ಯೆ |
|---|---|---|
| 20 | 5 | 4 |
| 20 | | 5 |
| 20 | 2 | |
| 20 | | |

## ಸಿಹಿ ಮಾವು

ಶಾಲೆಯ ಬಳಿಯ ಮಾವಿನ ಮರ ನೋಡಿದಿರಲ್ಲವೇ. ಗಾಳಿಗೆ ತುಂಬಾ ಮಾವುಗಳು ಕೆಳಗೆ ಬಿದ್ದವು.

ಅಜಿಲ್ ಮತ್ತು ಗೆಳೆಯರು ಮಾವುಗಳನ್ನು ಹೆಕ್ಕಿದರು.

- 16 ಹಣ್ಣುಗಳು
- 28 ಕಾಯಿಗಳು
- 36 ಮಾವಿನ ಮಿಡಿಗಳು



ಅಜಿಲ್‌ನ ಶಾಲೆಯಲ್ಲಿ 4 ತರಗತಿಗಳಿವೆ.



ಮಾವಿನ ಹಣ್ಣುಗಳನ್ನು ಹಾಗೂ ಮಾವಿನ ಕಾಯಿಗಳನ್ನು ನಾಲ್ಕು ತರಗತಿಗಳಿಗೆ ಸಮಾನವಾಗಿ ನೀಡಲಾಯಿತು.

ಮಾವಿನ ಹಣ್ಣುಗಳನ್ನು ಗುಂಪುಮಾಡಿರಿ... ಬಣ್ಣ ಹಚ್ಚಿರಿ.

| | |
|---|---|
| ತರಗತಿ 1 | ತರಗತಿ 2 |
| ತರಗತಿ 3 | ತರಗತಿ 4 |

ಈ ಗುಂಪುಗಳಲ್ಲಿ ಎಷ್ಟು ?

[ ] $4 \times 4 = 16$

ಮಾವಿನ ಕಾಯಿಗಳನ್ನು ಗುಂಪುಮಾಡಿರಿ... ಬಣ್ಣ ಹಚ್ಚಿರಿ.

| | |
|---|---|
| ತರಗತಿ 1 | ತರಗತಿ 2 |
| ತರಗತಿ 3 | ತರಗತಿ 4 |

ಈ ಗುಂಪುಗಳಲ್ಲಿ ಎಷ್ಟು ?

[ ] $7 \times 4 = 28$

ಮಾವಿನ ಮಿಡಿಗಳನ್ನು ಅಜಿಲ್ ಮತ್ತು ಗೆಳೆಯರು ಸೇರಿ ಹಂಚಿಕೊಂಡರು. ಮಿಡಿಗಳನ್ನು ಗುಂಪು ಮಾಡಿ ಬಣ್ಣ ಹಚ್ಚಿರಿ...

ಎಷ್ಟು ಗುಂಪುಗಳು ? [ ] ಒಂದು ಗುಂಪಿನಲ್ಲಿ ಎಷ್ಟು ? [ ] ....... × ...... = 36

## ಮಂಜಟ್ಟಿ ಆಟ

ಗಣಿತ ಪೆಟ್ಟಿಗೆಗೆ ಅಗತ್ಯವಾದ ಮಂಜಟ್ಟಿಕಾಯಿಗಳನ್ನು ಶೇಖರಿಸುವುದಕ್ಕಾಗಿ ಅಜಿಲ್ ಮತ್ತು ಗೆಳೆಯರು ಶಾಲಾ ಪರಿಸರದಲ್ಲಿದ್ದ ಮಂಜಟ್ಟಿ ಮರದ ಹತ್ತಿರ ಬಂದರು.




ಪಾತ್ರೆಯಲ್ಲಿ ಒಟ್ಟು 12 ಮಂಜಟ್ಟಿ ಕಾಯಿಗಳು.

ಅಭಿನಯಳು ಒಂದು ಮಂಜಟ್ಟಿಯಂತೆ ಪ್ರತಿಯೊಬ್ಬರಿಗೂ ಕೊಟ್ಟಳು.

ಒಂದು ಸಲ ಕೊಟ್ಟಾಗ ಬಾಕಿ ಉಳಿದದ್ದು $12 - 4 = 8$

ಎರಡು ಸಲ ಕೊಟ್ಟಾಗ ಬಾಕಿ ಉಳಿದದ್ದು $8 - 4 = 4$

ಮೂರು ಸಲ ಕೊಟ್ಟಾಗ ಬಾಕಿ ಉಳಿದದ್ದು $4 - 4 = 0$




ಒಟ್ಟು ಇದ್ದ ಮಂಜಟ್ಟಿಕಾಯಿಗಳು ☐

ಎಷ್ಟು ಮಂದಿಗೆ ಹಂಚಲಾಯಿತು ? ☐

ಒಬ್ಬರಿಗೆ ಎಷ್ಟು ಲಭಿಸಿತು ? ☐

.......... × .......... = 12

12 ಮಂಜಟ್ಟಿಕಾಯಿಗಳನ್ನು 4 ಮಂದಿಗೆ ಸಮಾನವಾಗಿ ಹಂಚಿದರೆ ಪ್ರತಿಯೊಬ್ಬರಿಗೂ 3 ರಂತೆ ಮಂಜಟ್ಟಿಕಾಯಿಗಳು ಸಿಗುತ್ತವೆ.



12 ಮಂಜಟ್ಟಿಕಾಯಿಗಳನ್ನು 3 ಮಂದಿಗೆ ಸಮಾನವಾಗಿ ಹಂಚಿದರೋ ?

ಒಂದು ಸಲ ನೀಡಿದಾಗ ಬಾಕಿ ಉಳಿದದ್ದು 12 – 3 = 9

2 ಸಲ ನೀಡಿದಾಗ ಬಾಕಿ ಉಳಿದದ್ದು ................

3 ಸಲ ನೀಡಿದಾಗ ಬಾಕಿ ಉಳಿದದ್ದು ................

4 ಸಲ ನೀಡಿದಾಗ ಬಾಕಿ ಉಳಿದದ್ದು ................

ಒಟ್ಟು ಇದ್ದ ಮಂಜಟ್ಟಿ ಕಾಯಿಗಳು [ ]

ಎಷ್ಟು ಮಂದಿಗೆ ಹಂಚಲಾಯಿತು ? [ ]

ಒಬ್ಬರಿಗೆ ಸಿಕ್ಕಿದ್ದು ? [ ] .......... × .......... = 12

12 ಮಂಜಟ್ಟಿ ಕಾಯಿಗಳನ್ನು 2 ಮಂದಿಗೆ ಸಮಾನವಾಗಿ ಹಂಚಿದರೋ?

ಒಂದು ಸಲ ನೀಡಿದಾಗ ಬಾಕಿ ಉಳಿದದ್ದು ................

2 ಸಲ ನೀಡಿದಾಗ ಬಾಕಿ ಉಳಿದದ್ದು ................



3 ಸಲ ನೀಡಿದಾಗ ಬಾಕಿ ಉಳಿದದ್ದು ..............................................................................

..............................................................................................................................

..............................................................................................................................

..............................................................................................................................

ಒಟ್ಟು ಇದ್ದ ಮಂಜಟ್ಟಿ ಕಾಯಿಗಳು [ ]

ಎಷ್ಟು ಮಂದಿಗೆ ಹಂಚಲಾಯಿತು ? [ ]

ಒಬ್ಬರಿಗೆ ಸಿಕ್ಕಿದ್ದು ? [ ] .......... × .......... = 12

12 ಮಂಜಟ್ಟಿ ಕಾಯಿಗಳನ್ನು 2 ಮಂದಿಗೆ ಸಮಾನವಾಗಿ ಹಂಚಿದಾಗ ಪ್ರತಿಯೊಬ್ಬರಿಗೂ 6 ರಂತೆ ಲಭಿಸಿತು.

12 ಮಂಜಟ್ಟಿ ಕಾಯಿಗಳನ್ನು ಸಮಾನ ಸಂಖ್ಯೆಯ 4 ಗುಂಪುಗಳಾಗಿ ಮಾಡಿದರೆ ಪ್ರತಿಯೊಂದು ಗುಂಪಿನಲ್ಲೂ 3 ರಂತೆ ಇರುವುದು.

12 ನ್ನು 3 ಗುಂಪುಗಳಾಗಿ ಮಾಡಿದರೆ ಪ್ರತಿಯೊಂದು ಗುಂಪಿನಲ್ಲೂ ಎಷ್ಟು ? ☐

12 ಮಂಜಟ್ಟಿ ಕಾಯಿಗಳನ್ನು ಸಮಾನ ಸಂಖ್ಯೆಯ 2 ಗುಂಪುಗಳಾಗಿ ಮಾಡಿದರೆ



ಪ್ರತಿ ಗುಂಪಿನಲ್ಲೂ 6 ರಂತೆ ಇರುವುದು.

12 ನ್ನು ಒಂದೇ ರೀತಿಯ 2 ಗುಂಪುಗಳಾಗಿ ಮಾಡಿದರೆ ಪ್ರತಿಯೊಂದು ಗುಂಪಿನಲ್ಲೂ 6.

12 ನ್ನು ಎರಡು ಸಮಭಾಗ ಮಾಡಿದರೆ ಪ್ರತಿಯೊಂದು ಭಾಗದಲ್ಲೂ 6.

12 ನ್ನು ಎರಡಾಗಿ ಹಂಚಿದರೆ ಪ್ರತಿಯೊಂದರಲ್ಲೂ 6.

12 ನ್ನು 2 ರಿಂದ ಭಾಗಿಸಿದರೆ 6 ಎಂದು ಹೇಳಬಹುದು.

ಚಿಹ್ನೆ ಉಪಯೋಗಿಸಿ $12 \div 2 = 6$ ಎಂದು ಬರೆಯಬಹುದು.

$12 \div 2 = 6$

ಇದನ್ನು

12 ಭಾಗಿಸು 2 ಸಮ 6 ಎಂದು ಓದಬಹುದು.

12 ಮಂಜಟ್ಟಿ ಕಾಯಿಗಳನ್ನು ಒಂದೇ ರೀತಿಯ 3 ಗುಂಪುಗಳು ಮಾಡಿದರೆ.



ಪ್ರತಿಯೊಂದು ಗುಂಪಿನಲ್ಲೂ 4 ರಂತೆ ಇರುವುದು.

12 ನ್ನು ಒಂದೇ ರೀತಿಯ 3 ಗುಂಪುಗಳಾಗಿ ಮಾಡಿದರೆ, ಪ್ರತಿ ಗುಂಪಿನಲ್ಲಿ 4.

ಅಂದರೆ 12 ನ್ನು 3 ರಿಂದ ಭಾಗಿಸಿದರೆ 4 ಆಗಿದೆ.

12 ಭಾಗಿಸು 3 ಸಮ 4

$12 \div 3 = 4$ $3 \times 4 = 12$

12 ಮಂಜಟ್ಟಿ ಕಾಯಿಗಳನ್ನು ಸಮಾನ ಸಂಖ್ಯೆಯ 4 ಗುಂಪು ಮಾಡಿದರೆ

12 ಭಾಗಿಸು 4 ಸಮ 3

$12 \div 4 = 3$ $4 \times 3 = 12$

12 ಮಂಜಟ್ಟಿ ಕಾಯಿಗಳನ್ನು ಸಮಾನ ಸಂಖ್ಯೆಯ 6 ಗುಂಪು ಮಾಡಿದರೆ

12 ಭಾಗಿಸು 6 ಸಮ ........

........ ÷ ........ = ........ .... × .... = 12

ಬರೆಯಿರಿ...

| ಸಂದರ್ಭ | ಗಣಿತ ಕ್ರಿಯೆ | ಕ್ರಿಯಾ ರೂಪ | |
|---|---|---|---|
| 12 ಮಂಜಟ್ಟಿ ಕಾಯಿಗಳನ್ನು 2 ಮಂದಿಗೆ ಸಮಾನವಾಗಿ ಹಂಚಲಾಯಿತು. | 12 ನ್ನು ಸಮಾನ ಸಂಖ್ಯೆಯ 2 ಗುಂಪುಗಳಾಗಿ ಮಾಡಲಾಯಿತು. | 12 ನ್ನು 2 ರಿಂದ ಭಾಗಿಸಲಾಯಿತು. | $12 \div 2 = 6$ |
| 12 ಮಂಜಟ್ಟಿ ಕಾಯಿಗಳನ್ನು 4 ಮಂದಿಗೆ ಸಮಾನವಾಗಿ ಹಂಚಲಾಯಿತು. | | | $12 \div 4 = 3$ |
| | 12 ನ್ನು ಸಮಾನ ಸಂಖ್ಯೆಯ 3 ಗುಂಪುಗಳಾಗಿ ಮಾಡಲಾಯಿತು. | | |
| | | | |

ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಸಂದರ್ಭ | ಗಣಿತ ಕ್ರಿಯೆ | ಕ್ರಿಯಾ ರೂಪ | |
|---|---|---|---|
| 6 ಮಿಠಾಯಿಗಳನ್ನು 2 ಮಂದಿಗೆ ಸಮಾನವಾಗಿ ಹಂಚಲಾಯಿತು. | 6 ನ್ನು ಸಮಾನ ಸಂಖ್ಯೆಯ 2 ಗುಂಪುಗಳಾಗಿ ಮಾಡಲಾಯಿತು. | 6 ನ್ನು 2 ರಿಂದ ಭಾಗಿಸಲಾಯಿತು. | $6 \div 2 = 3$ |
| 16 ಪೆನ್ಸಿಲ್‌ಗಳನ್ನು 4 ಮಂದಿಗೆ ಸಮಾನವಾಗಿ ಹಂಚಲಾಯಿತು. | | | |
| 18 ಪೆನ್ನುಗಳನ್ನು 6 ಮಂದಿಗೆ ಸಮಾನವಾಗಿ ಹಂಚಲಾಯಿತು. | | | |
| | | | |

## ಹೂವುಗಳನ್ನು ತಯಾರಿಸುವ

ಅಜಿಲ್ ಮತ್ತು ಸ್ನೇಹಿತರು ಕಲಿಕೋತ್ಸವದ ವೇದಿಕೆಯನ್ನು ಅಲಂಕರಿಸಲು ಹೂವುಗಳನ್ನು ತಯಾರಿಸುತ್ತಿದ್ದಾರೆ. ಒಂದು ಹೂವು ತಯಾರಿಸಲು 7 ಉರುಟುಗಳು ಬೇಕು. ಅಜಿಲ್‌ನ ಗುಂಪಿಗೆ 21 ಉರುಟುಗಳು ಲಭಿದುವು. ಅವರು ಎಷ್ಟು ಹೂವುಗಳನ್ನು ತಯಾರಿಸಬಹುದು?







- ಅಭಿನಯಳ ಗುಂಪಿಗೆ 35 ಉರುಟುಗಳು ಲಭಿಸಿದುವು.

  ಅವರು ಎಷ್ಟು ಹೂವುಗಳನ್ನು ಮಾಡಬಹುದು? .... × .... = 35

- 28 ಉರುಟುಗಳು ಲಭಿಸಿದರೆ ಎಷ್ಟು ಹೂವುಗಳನ್ನು ಮಾಡಬಹುದು?

## ಹೂವುಗಳ ಸಂಖ್ಯೆ

| ಗುಂಪು | ಲಭಿಸಿದ ಉರುಟುಗಳ ಸಂಖ್ಯೆ | ಒಂದು ಹೂವು ತಯಾರಿಸಲು ಬೇಕಾದ ಉರುಟುಗಳು | ಕ್ರಿಯೆ | ಹೂವುಗಳ ಸಂಖ್ಯೆ |
|---|---|---|---|---|
| 1 | 21 | 7 | $21 \div 7 = 3$ | 3 |
| 2 | 35 | 7 | | |
| 3 | 28 | 7 | | |
| 4 | 70 | 7 | | |
| 5 | 14 | 7 | | |




- $63 \div 7 = 9$ ಎಂಬ ಕ್ರಿಯೆಯನ್ನು ಒಂದು ಪ್ರಶ್ನೆಯಾಗಿ ಬರೆಯಬಹುದೇ ?.

## ಮೊಟ್ಟೆ ಟ್ರೇಗಳೆಷ್ಟು ?

- ಅಜಿಲ್‌ನ ತಂದೆಯ ಅಂಗಡಿಯಲ್ಲಿ ಎರಡು ರೀತಿಯ ಟ್ರೇಗಳಿವೆ.
  ಮೊದಲ ಟ್ರೇಯಲ್ಲಿ ತಲಾ 4 ಮೊಟ್ಟೆಗಳಂತೆ ಮತ್ತು ಎರಡನೇ ಟ್ರೇಯಲ್ಲಿ ತಲಾ 6 ಮೊಟ್ಟೆಗಳಂತೆ ಇಡಬಹುದು.

  24 ಮೊಟ್ಟೆಗಳನ್ನು ಇಡಲು ಎಷ್ಟು ಟ್ರೇಗಳು ಬೇಕಾಗುತ್ತವೆ?

  4 ಮೊಟ್ಟೆಗಳನ್ನಿಡುವ ಟ್ರೇಗಳಾದರೆ

  6 ಮೊಟ್ಟೆಗಳನ್ನಿಡುವ ಟ್ರೇಗಳಾದರೆ



ಪಟ್ಟಿಯನ್ನು ನೋಡಿರಿ.

| | |
|---|---|
| $6 \times 4 = 24$ | $24 \div 4 = 6$ |
| | $24 \div 6 = 4$ |

ಪೂರ್ತಿಗೊಳಿಸಿರಿ.

| | |
|---|---|
| $7 \times 8 = 56$ | $56 \div 7 = 8$ |
| | ...................... |

| | |
|---|---|
| $9 \times 4 = 36$ | ...................... |
| | ...................... |

| | |
|---|---|
| $6 \times 5 = 30$ | ...................... |
| | ...................... |

| | |
|---|---|
| $8 \times 4 = 32$ | ...................... |
| | ...................... |

| | |
|---|---|
| $6 \times 3 = 18$ | $18 \div 6 = 3$ |
| | $18 \div 3 = 6$ |
| $24 \div 3 = 8$ | $8 \times 3 = 24$ |
| | |
| $9 \times 6 = 54$ | |
| | |
| $36 \div 9 = 4$ | |
| | |
| | |
| | |

## ತರಕಾರಿ ತೋಟ




ಶಾಲೆಯ ತರಕಾರಿ ತೋಟಕ್ಕೆ 45 ಸಸಿಗಳನ್ನು ತರಲಾಯಿತು. ಅವುಗಳನ್ನು ಐದು ಸಾಲುಗಳಾಗಿ ಇರಿಸಲಾಯಿತು.

ಒಂದು ಸಾಲಲ್ಲಿ ಎಷ್ಟು ಸಸಿಗಳು ? ☐

45 ನ್ನು 5 ಸಮಾನ ಭಾಗಗಳಾಗಿ ಮಾಡಿದರೆ ಒಂದು ಭಾಗ ☐

45 ನ್ನು 5 ರಿಂದ ಭಾಗಿಸಿದರೆ ☐

$45 \div 5 =$ ☐ .......... × .......... = 45

## ಶಾಲೆಯ ಉದ್ಯಾನದ ರೈಲು

ಅಜಿಲ್‌ನ ಶಾಲೆಯ ಪ್ರೀ ಪ್ರೈಮರಿ ವಿಭಾಗದಲ್ಲಿ 32 ವಿದ್ಯಾರ್ಥಿಗಳಿದ್ದಾರೆ. ಶಾಲಾ ಉದ್ಯಾನದ ರೈಲಿನಲ್ಲಿ 4 ಬೋಗಿಗಳಿವೆ. ಪ್ರತಿಯೊಂದು ಬೋಗಿಯಲ್ಲೂ ಸಮಾನ ಸಂಖ್ಯೆಯ ಮಕ್ಕಳು ಹತ್ತುವುದಾದರೆ ಒಂದು ಬೋಗಿಯಲ್ಲಿ ಎಷ್ಟು ಮಕ್ಕಳು ?

☐ ÷ ☐ = ☐

## ಆಟದ ಗಾಡಿ

ಅಜಿಲ್‌ನ ತರಗತಿಯ 18 ಮಕ್ಕಳು ಉದ್ಯಾನದಲ್ಲಿ ಆಟದ ಗಾಡಿಯನ್ನು ಹತ್ತಲು ಹೋದರು.
ಒಂದು ಗಾಡಿಯಲ್ಲಿ 3 ಮಂದಿಗೆ ಹತ್ತಬಹುದು.
ಎಲ್ಲರೂ ಒಂದೇ ಸಮಯದಲ್ಲಿ ಹತ್ತುವುದಾದರೆ ಎಷ್ಟು ಆಟದ ಗಾಡಿಗಳು ಬೇಕು?

☐ ÷ ☐ = ☐

ತಲಾ 2 ಮಂದಿಗೆ ಹತ್ತಲು ಸಾಧ್ಯವಿರುವ ಆಟದ ಗಾಡಿಗಳಾದರೋ?

☐ ÷ ☐ = ☐

## ಆಟವಾಡಿ ಗೆಲ್ಲಿರಿ...

145 ನೇ ಪುಟದಲ್ಲಿ ಕೊಟ್ಟಿರುವ ಹಾವು-ಏಣಿ ಆಟದ ಬೋರ್ಡ್ ನೋಡಿರಿ...

- ಮೊದಲು 1 ಎಂಬ ಸಂಖ್ಯೆ ಬರೆದ ಕೋಣೆಯಿಂದ ಪ್ರಾರಂಭಿಸಿರಿ.
- ಏಣಿಯಲ್ಲಿ ಹತ್ತಿ ಮತ್ತು ಹಾವಿನಲ್ಲಿ ಇಳಿದು ಆಟವಾಡಿರಿ.
- ಕೆಲವು ಕೋಣೆಗಳಲ್ಲಿ ಕ್ರಿಯೆಯನ್ನು ನೀಡಲಾಗಿದೆ. ಉತ್ತರವಿರುವ ಕೋಣೆಗೆ ಬಟನನ್ನು ದೂಡಿ ಇಡಬೇಕು.
- ಮೊದಲು 100 ಕ್ಕೆ ತಲುಪುವವರು ಗೆಲ್ಲುತ್ತಾರೆ.

## ಮೌಲ್ಯಮಾಪನ ಚಟುವಟಿಕೆಗಳು

**1. ಮಿಠಾಯಿಗಳೆಷ್ಟು?**

15 ಮಿಠಾಯಿಗಳನ್ನು 3 ಮಕ್ಕಳಿಗೆ ಸಮಾನವಾಗಿ ನೀಡಿದರೆ, ಒಂದು ಮಗುವಿಗೆ ಎಷ್ಟು ಮಿಠಾಯಿಗಳು ಲಭಿಸುತ್ತವೆ ?

**2. ತರಗತಿಯ ಬೆಂಚು**

ಶಿಯಾನಿನ ತರಗತಿಯಲ್ಲಿ 28 ಮಕ್ಕಳಿದ್ದಾರೆ. ಒಂದು ಬೆಂಚಿನಲ್ಲಿ 4 ಮಂದಿಯಂತೆ ಕುಳಿತಿದ್ದಾರೆ. ತರಗತಿಯಲ್ಲಿ ಎಷ್ಟು ಬೆಂಚುಗಳಿವೆ?

**3. ನೋಟು ಮತ್ತು ನಾಣ್ಯ**

50 ರೂಪಾಯಿಯ ಒಂದು ನೋಟನ್ನು 5 ರೂಪಾಯಿ ನಾಣ್ಯಗಳಾಗಿ ಮಾಡಿದರೆ, ಎಷ್ಟು ನಾಣ್ಯಗಳು ಸಿಗುತ್ತವೆ ?

- 10 ರೂಪಾಯಿಯಂತೆ ಎಷ್ಟು ಮಂದಿಗೆ ಕೊಡಬಹುದು ?

**4. ಅಡ್ಡ ಮತ್ತು ನೀಟ**

81 ಮಕ್ಕಳನ್ನು ಅಡ್ಡ ಮತ್ತು ನೀಟ ಸಾಲುಗಳಾಗಿ ನಿಲ್ಲಿಸಲಾಗಿದೆ. ಪ್ರತಿಯೊಂದು ಸಾಲಿನಲ್ಲೂ ಸಮಾನ ಸಂಖ್ಯೆಯ ಮಕ್ಕಳಿದ್ದಾರೆ.

- ಅಡ್ಡ ಸಾಲಿನಲ್ಲಿ ಎಷ್ಟು ಮಕ್ಕಳು ?
- ನೀಟ ಸಾಲಿನಲ್ಲಿ ಎಷ್ಟು ಮಕ್ಕಳು ?

**5. ಮ್ಯಾಜಿಕ್ ಬಾಕ್ಸ್**

ಮ್ಯಾಜಿಕ್ ಬಾಕ್ಸ್‌ನಲ್ಲಿ ಯಾವುದೇ ವಸ್ತುವನ್ನು ಹಾಕಿದರೂ, ಅದು ಪ್ರತಿ ನಿಮಿಷಕ್ಕೆ ಅದರ ಇಮ್ಮಡಿಯೊಂದಿಗೆ 1 ಹೆಚ್ಚಾಗುತ್ತದೆ. ಪೆಟ್ಟಿಗೆಯಲ್ಲಿ 1 ಮಿಠಾಯಿ ಹಾಕಿದ 4 ನಿಮಿಷಗಳ ನಂತರ, 31 ಮಿಠಾಯಿಗಳಾದವು. 3 ನಿಮಿಷಗಳ ನಂತರ ಪೆಟ್ಟಿಗೆಯಲ್ಲಿ ಎಷ್ಟು ಮಿಠಾಯಿಗಳಿವೆ ?

# 11

# ಬಾಟ್ಲಿಯಲ್ಲೆಷ್ಟು ? ಚೀಲದಲ್ಲೆಷ್ಟು ?



## ನೀರು ಕೈಬದಲಾಯಿಸುವ ಆಟ

ಪುಟ 159 ರ ಚಿತ್ರವನ್ನು ನೋಡಿರಿ...




ತರಗತಿಯಲ್ಲಿ ಗೆದ್ದ ಗುಂಪು

ಲೆಜುವಿನ ತರಗತಿಯ ಮಕ್ಕಳು ಗುಂಪುಗಳಾಗಿ ಈ ಆಟವನ್ನು ಆಡಿದರು. ಆಟದ ಕೊನೆಯಲ್ಲಿ ಪ್ರತಿಯೊಂದು ಗುಂಪಿನ ಪಾತ್ರೆಯಲ್ಲಿ ಇದ್ದ ನೀರನ್ನು ಗ್ಲಾಸಿನಲ್ಲಿ ತುಂಬಿಸಿಡಲಾಗಿದೆ.




ಲೆಜುವಿನ ತರಗತಿಯಲ್ಲಿ ಗೆದ್ದ ಗುಂಪು ಯಾವುದು ?

## ವಾಟರ್ ಬೆಲ್




ಅತಿ ಹೆಚ್ಚು ನೀರನ್ನು ತುಂಬಿಸಲು ಸಾಧ್ಯವಿರುವ ಬಾಟ್ಲಿ ಯಾರದ್ದು ?

ಎಷ್ಟು ಗ್ಲಾಸ್ ನೀರನ್ನು ತುಂಬಿಸಲು ಸಾಧ್ಯವಿದೆ ?

## ಬಾಟ್ಲಿಯಲ್ಲೆಷ್ಟು ?



1 2 3 4 5

- ಅತಿ ಹೆಚ್ಚು ನೀರು ಹಿಡಿಯುವ ಬಾಟ್ಲಿ ಯಾವುದು ?
  ಬಾಟ್ಲಿಯ ಸುತ್ತಲೂ ಉರುಟು ಮಾಡಿರಿ.
- ಅತಿ ಕಡಿಮೆ ನೀರು ಹಿಡಿಯುವ ಬಾಟ್ಲಿ ಯಾವುದು ?
  ಬಾಟ್ಲಿಯ ಸುತ್ತಲೂ ಆಯತ ರಚಿಸಿರಿ.







## ಖರೀದಿಸುವ ವಸ್ತುಗಳು




ನಿಮ್ಮ ಮನೆಗೆ ಒಂದು ಲೀಟರ್ ಅಳತೆಯಲ್ಲಿ ಖರೀದಿಸುವ ವಸ್ತುಗಳು ಯಾವುವು ?

- 
- 
- 
- 
- 
- 

## ಅಳೆಯುವ... ತುಂಬಿಸುವ...

ಈ ಅಳತೆ ಪಾತ್ರೆಗಳನ್ನು ಉಪಯೋಗಿಸಿ ನಿಮ್ಮ ನೀರಿನ ಬಾಟ್ಲಿಯಲ್ಲಿ ಎಷ್ಟು ನೀರು ತುಂಬಿಸಬಹುದು ಎಂದು ನೋಡಿರಿ.







## ಅಳತೆ ಪಾತ್ರೆ ಮಾಡುವ

ಖಾಲಿ ಬಾಟ್ಲಿಗಳನ್ನು ಉಪಯೋಗಿಸಿ ಅಳತೆ ಪಾತ್ರೆಗಳ ಸಹಾಯದಿಂದ 1 ಲೀಟರ್, 500 ಮಿಲ್ಲಿಲೀಟರ್, 200 ಮಿಲ್ಲಿಲೀಟರ್ ಅಳತೆಯ ಪಾತ್ರೆಗಳನ್ನು ಮಾಡಿರಿ.

200 ಮಿಲ್ಲಿಲೀಟರ್ ಪಾತ್ರೆಯಲ್ಲಿ 100 ಮಿಲ್ಲಿಲೀಟರ್, 50 ಮಿಲ್ಲಿಲೀಟರ್ ಎಂಬೀ ಅಳತೆಗಳನ್ನೂ ಗುರುತಿಸಿರಿ...




ಒಂದು ಲೀಟರಿಗಿಂತ ಕಡಿಮೆ ಅಳತೆಯಲ್ಲಿ ಖರೀದಿಸಬಹುದಾದ ವಸ್ತುಗಳು ಯಾವುವು ? ಅವುಗಳ ಅಳತೆಯನ್ನು ಬರೆಯಿರಿ.

| ವಸ್ತು | ಅಳತೆ |
|---|---|
| ಹಾಲು | 500 ಮಿಲ್ಲಿಲೀಟರ್ |
| | |
| | |
| | |
| | |



## ನೀರು ಎಷ್ಟು ?

ನೀವು ಒಂದು ದಿನ ಎಷ್ಟು ಗ್ಲಾಸ್ ನೀರು ಕುಡಿಯುತ್ತೀರಿ ?

ಅಳೆದು ಹೇಳಿರಿ...

ನಿಮ್ಮ ಅಳತೆಪಾತ್ರೆಯನ್ನು ಉಪಯೋಗಿಸಿ ಮನೆಯ ವಿವಿಧ ಪಾತ್ರೆಗಳಲ್ಲಿ ಎಷ್ಟು ನೀರು ಹಿಡಿಯಬಹುದು ಎಂದು ಊಹಿಸಿ ಹಾಗೂ ಅಳೆದು ಬರೆಯಿರಿ...



| ಪಾತ್ರೆ | ಊಹೆ | ಅಳತೆ |
|---|---|---|
| ಚಹಾ ಗ್ಲಾಸ್ | | |
| ಕಪ್ | | |
| ಚಹಾ ಮಾಡುವ ಪಾತ್ರೆ | | |
| ಬಕೆಟ್ | | |
| ಮಗ್ | | |
| ಅನ್ನ ಬೇಯಿಸುವ ಪಾತ್ರೆ | | |
| | | |
| | | |
| | | |
| | | |

## ಹಾಲಿನ ಸೊಸೈಟಿ




ಲೆಜುವಿನ ತಂದೆಯು ಹಾಲಿನ ಸೊಸೈಟಿಗೆ ಹಾಲನ್ನು ನೀಡಿದರು.
2 ಲೀಟರ್ ಪಾತ್ರೆಯಲ್ಲಿ 2 ಸಲ ಹಾಲನ್ನು ಅಳೆದರು. 1 ಲೀಟರ್ ಪಾತ್ರೆಯಲ್ಲಿ 1 ಸಲ ಹಾಲನ್ನು ಅಳೆದರು. ಲೆಜುವಿನ ತಂದೆಯು ಸೊಸೈಟಿಗೆ ನೀಡಿದ ಹಾಲಿನ ಅಳತೆ ಎಷ್ಟು ?

- 2 ಲೀಟರ್ ಪಾತ್ರೆಯಲ್ಲಿ 2 ಸಲ ಅಳೆದರೆ ............... ಲೀಟರ್
- 1 ಲೀಟರ್ ಪಾತ್ರೆಯಲ್ಲಿ 1 ಸಲ ಅಳೆದರೆ ............... ಲೀಟರ್
- ಹಾಲಿನ ಅಳತೆ ............... ಲೀಟರ್

ಲೆಜುವಿನ ತಂದೆಯ ನಂತರ ಜಾನಕಿಯು ಹಾಲನ್ನು ನೀಡಿದಳು. ಹಾಲನ್ನು 1 ಲೀಟರ್ ಪಾತ್ರೆಯಲ್ಲಿ 3 ಸಲ ಹಾಗೂ 200 ಮಿಲ್ಲಿಲೀಟರ್ ಪಾತ್ರೆಯಲ್ಲಿ 2 ಸಲ ಅಳೆದು ಸೊಸೈಟಿಯ ಪಾತ್ರೆಗೆ ಸುರಿದರು. ಹಾಗಾದರೆ ಜಾನಕಿಯು ಸೊಸೈಟಿಗೆ ನೀಡಿದ ಹಾಲಿನ ಅಳತೆ ಎಷ್ಟು ?

.............. ಲೀಟರ್ .............. ಮಿಲ್ಲಿಲೀಟರ್

- 1 ಲೀಟರ್ ಪಾತ್ರೆಯಲ್ಲಿ 3 ಸಲ ಅಳೆದರೆ ............... ಲೀಟರ್
- 200 ಮಿಲ್ಲಿಲೀಟರ್ ಪಾತ್ರೆಯಲ್ಲಿ 2 ಸಲ ಅಳೆದರೆ ............... ಮಿ.ಲೀ.
- ಹಾಲಿನ ಅಳತೆ .......ಲೀಟರ್ ...... ಮಿ.ಲೀ.

ಹಾಲು ಖರೀದಿಸಲು ಬಂದ ಹೋಟೆಲಿನ ಬಶೀರಿಗೆ ಲೆಜುವಿನ ತಂದೆ ನೀಡಿದ ಹಾಲಿನಿಂದ 3 ಲೀಟರ್ ಹಾಲನ್ನು ಕೊಟ್ಟರು.
ಬಾಕಿಯಿರುವ ಹಾಲು ಎಷ್ಟು ?

## ಸಣ್ಣ ಅಳತೆ

ಚಿತ್ರದಲ್ಲಿ ಕಾಣುವ ಉಪಕರಣಗಳನ್ನು ಉಪಯೋಗಿಸುವ ಸಂದರ್ಭಗಳನ್ನು ಬರೆಯಿರಿ...



- ಮದ್ದು ಕುಡಿಯಲು
- ಪದಾರ್ಥಕ್ಕೆ ಉಪ್ಪು ಹಾಕಲು
- 
- 
- 
- 
- 
- 

ಮದ್ದು ಕುಡಿಯುವ ಚಮಚದಲ್ಲಿ ಎಷ್ಟು ಮಿಲ್ಲಿಲೀಟರ್ ಮದ್ದು ಹಿಡಿಯಬಹುದು ? ಅಳೆದು ಬರೆಯಿರಿ.

ಬಾಟ್ಲಿಯ ಮುಚ್ಚಳದಲ್ಲಿ ಎಷ್ಟು ನೀರು ಹಿಡಿಯಬಹುದು ? ಅಳೆದು ಬರೆಯಿರಿ...

## ಸೆಂಟ್ ವ್ಯಾಪಾರ

ಲೆಜುವಿನ ತಂದೆಗೆ ಸೆಂಟ್ ವ್ಯಾಪಾರವಿದೆ. ರಖಂ ವ್ಯಾಪಾರಿಗಳಿಂದ ಸೆಂಟ್ ಖರೀದಿಸಿ 5 ಮಿಲ್ಲಿಲೀಟರ್ ಬಾಟ್ಲಿಯಲ್ಲಿ ತುಂಬಿಸಿ ವ್ಯಾಪಾರವನ್ನು ಮಾಡುವರು. 20 ಬಾಟ್ಲಿಯಲ್ಲಿ ತುಂಬಿಸಲು ಎಷ್ಟು ಸೆಂಟ್ ಬೇಕು ?

20 ಮಿಲ್ಲಿಲೀಟರ್ ಸೆಂಟನ್ನು ಎಷ್ಟು ಬಾಟ್ಲಿಗಳಲ್ಲಿ ತುಂಬಿಸಬಹುದು ?

## ಸೂಪರ್ ಮಾರ್ಕೆಟ್







ಲೆಜುವಿನ ತಂದೆಯು ಸೂಪರ್ ಮಾರ್ಕೆಟ್‌ಗೆ ಅಗತ್ಯವಾದ ಸೆಂಟನ್ನು ಒದಗಿಸುತ್ತಾರೆ. ತಂದೆಯ ಜೊತೆ ಲೆಜುವು ಸೂಪರ್ ಮಾರ್ಕೆಟ್‌ಗೆ ತಲುಪಿದಳು.

ಒಂದು ಕಿಲೋಗ್ರಾಂ ಭಾರವಿರುವ ಯಾವೆಲ್ಲ ವಸ್ತುಗಳನ್ನು ಮನೆಗೆ ಖರೀದಿಸುತ್ತಾರೆ ?

- 
- 
- 
- 
- 






ಲೆಜು ಮತ್ತು ತಂದೆ ಸೂಪರ್ ಮಾರ್ಕೆಟ್‌ನಿಂದ ಖರೀದಿಸಿದ ವಸ್ತುಗಳು.

| | | | |
|---|---|---|---|
| ಅಕ್ಕಿ | - 10 ಕಿಲೋಗ್ರಾಂ | ಸಕ್ಕರೆ | - 1 ಕಿಲೋಗ್ರಾಂ |
| ಗೋಧಿಹುಡಿ | - 5 ಕಿಲೋಗ್ರಾಂ | ಅಕ್ಕಿ ಹುಡಿ | - 2 ಕಿಲೋಗ್ರಾಂ |
| ರವೆ | - 2 ಕಿಲೋಗ್ರಾಂ | ಪಚ್ಚೆ ಹೆಸರು | - 1 ಕಿಲೋಗ್ರಾಂ |







ಸೂಪರ್ ಮಾರ್ಕೆಟ್‌ನಿಂದ ಖರೀದಿಸಿದ ವಸ್ತುಗಳ ಭಾರ

.................. ಕಿಲೋಗ್ರಾಂ

## ಎಷ್ಟೊಂದು ಭಾರ




ತರಗತಿಯಲ್ಲಿ ನಿಮಗೆ ತಾವಾಗಿಯೇ ಎತ್ತಲು ಸಾಧ್ಯವಿರುವ ವಸ್ತುಗಳು ಯಾವುವು ?

ಎತ್ತಲು ಸಾಧ್ಯವಿಲ್ಲದ ವಸ್ತುಗಳಿವೆಯೇ ?

| ಎತ್ತಲು ಸಾಧ್ಯವಿರುವ ವಸ್ತುಗಳು | ಎತ್ತಲು ಸಾಧ್ಯವಿಲ್ಲದ ವಸ್ತುಗಳು |
|---|---|
| | |



## ಅಳೆದು ನೋಡಲು...


















## ಅಳೆದು ನೋಡುವ

| ನನ್ನ ಬ್ಯಾಗಿನ ಭಾರ | | ಗೆಳೆಯನ ಬ್ಯಾಗಿನ ಭಾರ | |
|---|---|---|---|
| ಊಹೆ | ಅಳೆದಾಗ ಸಿಕ್ಕಿದ್ದು | ಊಹೆ | ಅಳೆದಾಗ ಸಿಕ್ಕಿದ್ದು |
| | | | |

| ನನ್ನ ಭಾರ | | ಗೆಳೆಯನ ಭಾರ | |
|---|---|---|---|
| ಊಹೆ | ಅಳೆದಾಗ ಸಿಕ್ಕಿದ್ದು | ಊಹೆ | ಅಳೆದಾಗ ಸಿಕ್ಕಿದ್ದು |
| | | | |

## ಆರೋಗ್ಯ ಚಾರ್ಟ್

ತರಗತಿಯಲ್ಲಿರುವವರ ವಿವರಗಳನ್ನು ಕಂಡುಹಿಡಿದು ಚಾರ್ಟನ್ನು ಪೂರ್ತಿಗೊಳಿಸಿರಿ.

| ಹುಡುಗರು | | | | ಹುಡುಗಿಯರು | | | |
|---|---|---|---|---|---|---|---|
| ಹೆಸರು | ವಯಸ್ಸು | ಎತ್ತರ ಸೆಂಟಿಮೀಟರ್ | ಭಾರ ಕಿಲೋಗ್ರಾಂ | ಹೆಸರು | ವಯಸ್ಸು | ಎತ್ತರ ಸೆಂಟಿಮೀಟರ್ | ಭಾರ ಕಿಲೋಗ್ರಾಂ |
| | | | | | | | |

ಕುಟುಂಬಾರೋಗ್ಯ ಕೇಂದ್ರದ ಚಾರ್ಟಿನ ಪ್ರಕಾರ 7, 8, 9 ವಯಸ್ಸಿನವರಿಗೆ ಇರಬೇಕಾದ ಎತ್ತರ ಹಾಗೂ ಭಾರವನ್ನು ಪಟ್ಟಿಯಲ್ಲಿ ಕೊಡಲಾಗಿದೆ.

| ಹುಡುಗರು | | | ಹುಡುಗಿಯರು | | |
|---|---|---|---|---|---|
| ವಯಸ್ಸು | ಎತ್ತರ ಸೆಂಟಿಮೀಟರಿನಲ್ಲಿ | ಭಾರ ಕಿಲೋಗ್ರಾಂನಲ್ಲಿ | ವಯಸ್ಸು | ಎತ್ತರ ಸೆಂಟಿಮೀಟರಿನಲ್ಲಿ | ಭಾರ ಕಿಲೋಗ್ರಾಂನಲ್ಲಿ |
| 7 | 122 | 23 | 7 | 121 | 22 |
| 8 | 127 | 26 | 8 | 126 | 25 |
| 9 | 133 | 28 | 9 | 133 | 28 |

ನಿಮ್ಮ ತರಗತಿಯ ಗೆಳೆಯರ ಭಾರ ಹಾಗೂ ಎತ್ತರವನ್ನು ಮೇಲೆ ನೀಡಿರುವ ಚಾರ್ಟಿನ ಆಧಾರದಲ್ಲಿ ವಿಶ್ಲೇಷಿಸಿ ಒಂದು ಟಿಪ್ಪಣಿ ತಯಾರಿಸಿರಿ.

## ಓಣಂ ಕಿಟ್



ಲೆಜುವಿನ ಮನೆಯ ಬಳಿಯ 'ಮಂದಹಾಸ ಕ್ಲಬ್'ನವರು ಓಣಂ ಹಬ್ಬದ ಪ್ರಯುಕ್ತ ವಿತರಿಸಿದ ಕಿಟ್‌ನಲ್ಲಿದ್ದ ವಿವಿಧ ವಸ್ತುಗಳು ಹಾಗೂ ಅವುಗಳ ಭಾರವನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| | |
|---|---|
| ಚಹಾ ಹುಡಿ | 100 ಗ್ರಾಂ |
| ಸಕ್ಕರೆ | 1 ಕಿಲೋಗ್ರಾಂ |
| ಗೋಡಂಬಿ | 40 ಗ್ರಾಂ |
| ತುಪ್ಪ | 50 ಗ್ರಾಂ |
| ಏಲಕ್ಕಿ | 10 ಗ್ರಾಂ |
| ಶರ್ಕರವರಟ್ಟಿ | 50 ಗ್ರಾಂ |
| ಮೆಣಸಿನ ಹುಡಿ | 500 ಗ್ರಾಂ |

| | |
|---|---|
| ಅರಶಿನ ಹುಡಿ | 100 ಗ್ರಾಂ |
| ತೆಂಗಿನ ಎಣ್ಣೆ | 1 ಕಿಲೋಗ್ರಾಂ |
| ಬೆಳ್ತಿಗೆ ಅಕ್ಕಿ | 500 ಗ್ರಾಂ |
| ಪಚ್ಚೆ ಹೆಸರು | 500 ಗ್ರಾಂ |
| ತೊಗರಿಬೇಳೆ | 200 ಗ್ರಾಂ |
| ಉಪ್ಪು | 1 ಕಿಲೋಗ್ರಾಂ |
| ಬಾಳೆಕಾಯಿ ಚಿಪ್ಸ್ | 250 ಗ್ರಾಂ |

- ಕಿಟ್‌ನಲ್ಲಿ 1 ಕಿಲೋಗ್ರಾಂ ಭಾರವಿರುವ ಎಷ್ಟು ವಸ್ತುಗಳಿವೆ ? ☐
  ಅವುಗಳ ಭಾರವೆಷ್ಟು ? ☐

- ಕಿಟ್‌ನಲ್ಲಿ 1 ಕಿಲೋಗ್ರಾಂಗಿಂತ ಕಡಿಮೆ ಭಾರವಿರುವ ಯಾವ ಯಾವ ವಸ್ತುಗಳಿವೆ ?




## ಮೌಲ್ಯಮಾಪನ ಚಟುವಟಿಕೆಗಳು

**1. ಬಾಟ್ಲಿಗಳೆಷ್ಟು ?**

ಒಂದು ದಿನಸಿ ಅಂಗಡಿಯಲ್ಲಿ 10 ಲೀಟರ್ ತೆಂಗಿನ ಎಣ್ಣೆ ಸ್ಟೋಕ್ ಇದೆ. ಇದನ್ನು ಒಂದು ಲೀಟರ್ ಬಾಟ್ಲಿಗಳಲ್ಲಿ ತುಂಬಿಸಲು ಎಷ್ಟು ಬಾಟ್ಲಿಗಳು ಬೇಕು ?
ಎರಡು ಲೀಟರ್ ಬಾಟ್ಲಿಗಳಾದರೆ ?

**2. ಲೆಜುವಿನ ಮನೆ**

ಲೆಜುವಿನ ಮನೆಗೆ ಬಣ್ಣ ಬಳಿಯಬೇಕಾಗಿದೆ. ಖರೀದಿಸಿದ ಪೈಂಟಿನ ಅಳತೆಯನ್ನು ಕೆಳಗೆ ಕೊಡಲಾಗಿದೆ.

| ಪೈಂಟಿನ ಬಣ್ಣ | ಅಳತೆ |
|---|---|
| ಬಿಳಿ | 20 ಲೀಟರ್ |
| ಹಸಿರು | 5 ಲೀಟರ್ |
| ಹಳದಿ | 5 ಲೀಟರ್ |
| ನೇರಳೆ | 1 ಲೀಟರ್ |
| ನೀಲಿ | 2 ಲೀಟರ್ |

ಖರೀದಿಸಿದ ಪೈಂಟಿನ ಒಟ್ಟು ಅಳತೆ ಎಷ್ಟು ?

**3. ಗ್ಯಾಸ್ ಸಿಲಿಂಡರ್**



ಗ್ಯಾಸ್ ತುಂಬಿಸಿದ ಒಂದು ಸಿಲಿಂಡರಿನ ಭಾರವು 29 ಕಿಲೋಗ್ರಾಂ ಆಗಿದೆ. ಖಾಲಿ ಸಿಲಿಂಡರಿನ ಭಾರವು 15 ಕಿಲೋಗ್ರಾಂ ಆಗಿದೆ. ಸಿಲಿಂಡರಿನ ಒಳಗಿರುವ ಗ್ಯಾಸಿನ ಭಾರವು ಎಷ್ಟು ?

ಸಿಲಿಂಡರಿನಲ್ಲಿ ಅರ್ಧ ಗ್ಯಾಸ್ ತುಂಬಿರುವಾಗ ಸಿಲಿಂಡರಿನ ಒಟ್ಟು ಭಾರ ಎಷ್ಟು ?

**4. ಎಣ್ಣೆಯನ್ನು ಅಳೆಯುವ**

500 ಮಿಲ್ಲಿಲೀಟರ್ ಎಣ್ಣೆ ಬೇಕು. 200 ಮಿಲ್ಲಿಲೀಟರ್, 100 ಮಿಲ್ಲಿಲೀಟರ್ ಅಳತೆ ಪಾತ್ರೆಗಳು ಮಾತ್ರವೇ ಇರುವುದು. ಇವುಗಳನ್ನು ಉಪಯೋಗಿಸಿ 500 ಮಿಲ್ಲಿಲೀಟರ್ ಎಣ್ಣೆಯನ್ನು ಯಾವ ಯಾವ ರೀತಿಯಲ್ಲಿ ಅಳೆಯಬಹುದು ?

**5. ಅಳೆಯುವುದು ಹೇಗೆ ?**

500 ಮಿಲ್ಲಿಲೀಟರ್, 200 ಮಿಲ್ಲಿಲೀಟರ್ ಅಳತೆಯ ಪಾತ್ರೆಗಳು ಮಾತ್ರವೇ ಇರುವುದು. ಇವುಗಳನ್ನು ಉಪಯೋಗಿಸಿ 100 ಮಿಲ್ಲಿಲೀಟರನ್ನು ಹೇಗೆ ಅಳೆಯಬಹುದು ?

**6. ಗಣಿತಲ್ಯಾಬ್**

ಗಣಿತದ ಲ್ಯಾಬಿಗೆ 4 ತೂಕದ ಗಟ್ಟಿಗಳನ್ನು ಮಾಡಿದರು.

4 ತೂಕದ ಗಟ್ಟಿಗಳ ಒಟ್ಟು ಭಾರ 15 ಕಿಲೋಗ್ರಾಂ ಆಗಿದೆ. ಈ ಗಟ್ಟಿಗಳನ್ನು ಉಪಯೋಗಿಸಿ 1 ರಿಂದ 15 ಕಿಲೋಗ್ರಾಂ ವರೆಗಿನ ಭಾರವನ್ನು ಅಳೆಯುವ.
ಪ್ರತಿಯೊಂದು ಗಟ್ಟಿಯ ಭಾರವು ಎಷ್ಟು ?

14 ಕಿಲೋಗ್ರಾಂ ಭಾರವನ್ನು ಹೇಗೆ ಅಳೆಯಬಹುದು ?

7 ಕಿಲೋಗ್ರಾಂ ಭಾರವನ್ನೋ ?



# 12

# ಒಂದೇ ನೋಟದಲ್ಲಿ

## ಫ್ರೂಟ್ ಸಾಲಡ್

ಮಿಲನ್‌ನ ತರಗತಿಯ ಮಕ್ಕಳು ಫ್ರೂಟ್ ಸಾಲಡ್ ಮಾಡುವುದಕ್ಕಾಗಿ ಹಣ್ಣುಗಳನ್ನು ತಂದರು.




ಹಣ್ಣುಗಳನ್ನು ವರ್ಗೀಕರಿಸಿ ಇಟ್ಟಿರುವುದನ್ನು ನೋಡಿರಿ.



| ಹಣ್ಣು |  |  |  |  |  |  |
|---|---|---|---|---|---|---|
| ಸಂಖ್ಯೆ | | | | | | |

- ಯಾವ ತರದ ಹಣ್ಣು ಹೆಚ್ಚು ಇರುವುದು ?




- ಒಂದು ಮಾತ್ರ ಇರುವ ಹಣ್ಣು ಯಾವುದು ?

- ಸಮಾನ ಸಂಖ್ಯೆಯ ಹಣ್ಣುಗಳು ಯಾವುವು ?

- ಅನನಾಸಿಗಿಂತ ಪೇರಳೆ ಎಷ್ಟು ಹೆಚ್ಚು ಇದೆ ?

- ಮಾವಿನ ಹಣ್ಣಿಗಿಂತ ಹೆಚ್ಚು ಇರುವ ಹಣ್ಣುಗಳು ಯಾವುವು ?

ಅವರು ಶಾಲೆಯ ಅಡುಗೆಕೋಣೆಯಿಂದ ಪಾತ್ರೆಗಳನ್ನು ತಂದು ಫ್ರೂಟ್ ಸಾಲಡ್ ಮಾಡಿ ಎಲ್ಲರಿಗೂ ಕೊಟ್ಟರು.

ನೀವು ಫ್ರೂಟ್ ಸಾಲಡ್ ಮಾಡಿರಿ... ನೀವು ಅಡುಗೆಕೋಣೆಯಿಂದ ತಂದ ಪಾತ್ರೆಗಳು ಯಾವುವು ? ಪಟ್ಟಿಯಲ್ಲಿ ಬರೆಯಿರಿ.

| | | | | |
|---|---|---|---|---|
| ವಸ್ತು |  |  |  |  |
| ಸಂಖ್ಯೆ | | | | |

| | | | | |
|---|---|---|---|---|
| ವಸ್ತು |  | | | |
| ಸಂಖ್ಯೆ | | | | |

## ನನ್ನ ಮನೆಯಲ್ಲಿ

ನನ್ನ ಮನೆಯಲ್ಲಿರುವ ಪಾತ್ರೆಗಳ ಸಂಖ್ಯೆ.

| | | | | |
|---|---|---|---|---|
| ವಸ್ತು |  |  |  |  |
| ಸಂಖ್ಯೆ | | | | |

| | | | | |
|---|---|---|---|---|
| ವಸ್ತು |  |  |  | |
| ಸಂಖ್ಯೆ | | | | |

## ಸಿಹಿತಿಂಡಿಗಳು

ಪಾತ್ರೆಗಳು ಎಷ್ಟು ಇವೆ ಎಂದು ನೋಡಲು ಮಿಲನ್ ಅಡುಗೆ ಕೋಣೆಗೆ ಹೋದನು. ಅಮ್ಮ ಅವನಿಗೆ ಇಷ್ಟದ ಸಿಹಿತಿಂಡಿಯಾದ ಉಣ್ಣಿಯಪ್ಪವನ್ನು ಮಾಡುತ್ತಿದ್ದರು.




ಮಿಲನ್ ಉಣ್ಣಿಯಪ್ಪದೊಂದಿಗೆ ತರಗತಿಗೆ ಬಂದನು.



ನಿಮ್ಮ ತರಗತಿಯ ಎಲ್ಲಾ ಮಕ್ಕಳ ಇಷ್ಟದ ಸಿಹಿತಿಂಡಿಯನ್ನು ಕೇಳಿ ತಿಳಿದುಕೊಳ್ಳಿರಿ... ಪ್ರತಿಯೊಂದು ಸಿಹಿತಿಂಡಿಯನ್ನು ಇಷ್ಟಪಡುವವರ ಸಂಖ್ಯೆಯನ್ನು ಚಿತ್ರ ರೂಪದಲ್ಲಿ ಪಟ್ಟಿಯಲ್ಲಿ ಚಿತ್ರಿಸಿರಿ.



| ಸಿಹಿತಿಂಡಿ | ಸಂಖ್ಯೆ |
|---|---|
| • ಎಲೆಯಡೆ | |
| • ನೈಯಪ್ಪ | |
| • ಉದ್ದಿನ ವಡೆ | |
| • ಬೋಂಡ | |
| • ಉಣ್ಣಿಯಪ್ಪ | |
| • ಚಟ್ಟಂಬಡೆ | |
| • ನೀರುಳ್ಳಿ ಬಜೆ | |
| • |  |
| • | |

ಅತಿ ಹೆಚ್ಚು ಮಂದಿ ಇಷ್ಟಪಟ್ಟ ಸಿಹಿತಿಂಡಿ ಯಾವುದು ? ☐

ಎಷ್ಟು ಮಂದಿ ? ☐

ಉದ್ದಿನ ವಡೆಯನ್ನು ಇಷ್ಟಪಡುವವರು ಎಷ್ಟು ಮಂದಿ ? ☐

ಯಾರಿಗೂ ಇಷ್ಟವಿಲ್ಲದ ಸಿಹಿತಿಂಡಿ ಯಾವುದು ? ☐

ಈ ರೀತಿಯ ಕೆಲವು ಪ್ರಶ್ನೆಗಳನ್ನು ಬರೆಯಿರಿ... ಗೆಳೆಯರಲ್ಲಿ ಕೇಳಿರಿ...

- 
- 
- 
- 

## ಆಟದ ಗಾಡಿಗಳು

ಮಿಲನ್‌ನ ಹುಟ್ಟುಹಬ್ಬಕ್ಕೆ ಉಡುಗೊರೆಯನ್ನು ಖರೀದಿಸಲು ಅವರು ಆಟಿಕೆ ಅಂಗಡಿಗೆ ಬಂದರು. ಆಟದಗಾಡಿಗಳನ್ನು ಇಟ್ಟಿರುವುದನ್ನು ನೋಡಿರಿ...



ಪ್ರತಿಯೊಂದು ಆಟಿಕೆಯ ಚಿತ್ರವನ್ನು ರಚಿಸಿರಿ... ಸಂಖ್ಯೆ ಬರೆಯಿರಿ.

| | ಚಿತ್ರ | ಸಂಖ್ಯೆ |
|---|---|---|
|  | | |
|  | | |
|  | | |
|  | | |
|  | | |
|  | | |

ಅತಿ ಕಡಿಮೆ ಇರುವ ಗಾಡಿ ಯಾವುದು ?

ಸಮಾನ ಸಂಖ್ಯೆಯಲ್ಲಿರುವ ಗಾಡಿಗಳು ಯಾವುವು ?

ನನ್ನ ಪ್ರಶ್ನೆಗಳು

-
-
-
-
-

## ಏನೆಲ್ಲಾ ಕಾಣುತ್ತಿವೆ ?

ನಿಮ್ಮ ಶಾಲಾ ಕಟ್ಟಡವನ್ನು ನೋಡಿರಿ... ಕಿಟಕಿ, ಬಾಗಿಲು, ಬೋರ್ಡ್, ಸ್ವಿಚ್ ಬೋರ್ಡ್, ಫ್ಯಾನ್, ಲೈಟ್ ಹೀಗೆ ಏನೆಲ್ಲಾ ಕಾಣುತ್ತಿವೆ ? ಅವುಗಳನ್ನು ಪಟ್ಟಿಯಲ್ಲಿ ಸೇರಿಸಿರಿ.

| ವಸ್ತು | ಚಿತ್ರಗಳು | ಸಂಖ್ಯೆ |
|---|---|---|
| ಕಿಟಿಕಿ | | |
| ಬಾಗಿಲು | | |
| ಬೋರ್ಡ್ | | |
| ಸ್ವಿಚ್ ಬೋರ್ಡ್ | | |
| ಫ್ಯಾನ್ | | |
| ಲೈಟ್ | | |

ನನ್ನ ಪ್ರಶ್ನೆಗಳು

-
-

## ಚಿತ್ರ ಓದು

173-ನೇ ಪುಟದ ಚಿತ್ರವನ್ನು ನೋಡಿರಿ... ಚಿತ್ರದಲ್ಲಿ ಯಾವ ಯಾವ ಜೀವಿಗಳು ಇವೆ ? ಪಟ್ಟಿಯಲ್ಲಿ ಬರೆಯಿರಿ.

| ಹೆಸರು | ಸಂಖ್ಯೆ |
|---|---|
| ಮಂಗ | |
| | |
| | |
| | |
| | |
| | |
| | |
| | |

ನನ್ನ ಪ್ರಶ್ನೆಗಳು

- 
- 
- 
- 

## ಮೌಲ್ಯಮಾಪನ ಪ್ರಶ್ನೆಗಳು

### ಮಕ್ಕಳೆಷ್ಟು ?

ಮಿಲನ್‌ನ ಶಾಲೆಯಲ್ಲಿರುವ ಮಕ್ಕಳ ಸಂಖ್ಯೆಯನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| ತರಗತಿ | ಹುಡುಗರ ಸಂಖ್ಯೆ | ಹುಡುಗಿಯರ ಸಂಖ್ಯೆ |
|---|---|---|
| I | 15 | 19 |
| II | 20 | 20 |
| III | 19 | 22 |
| IV | 20 | 17 |

- ಅತಿ ಹೆಚ್ಚು ಹುಡುಗಿಯರು ಇರುವ ತರಗತಿ ಯಾವುದು ?
- ಅತಿ ಹೆಚ್ಚು ಮಕ್ಕಳು ಇರುವ ತರಗತಿ ಯಾವುದು ?

ನಾಲ್ಕನೇ ತರಗತಿಯ ಹುಡುಗರ ಸಂಖ್ಯೆಗಿಂತ ಒಂದನೇ ತರಗತಿಯ ಹುಡುಗರ ಸಂಖ್ಯೆ ಎಷ್ಟು ಕಡಿಮೆ ?

ಸಮಾನ ಸಂಖ್ಯೆಯ ಹುಡುಗರು ಇರುವ ತರಗತಿಗಳು ಯಾವುವು ?

ಮಿಲನ್‌ನ ಶಾಲೆಯ

ಹುಡುಗರ ಸಂಖ್ಯೆ ಎಷ್ಟು ?

ಹುಡುಗಿಯರ ಸಂಖ್ಯೆ ಎಷ್ಟು ?

ಒಟ್ಟು ಮಕ್ಕಳ ಸಂಖ್ಯೆ ಎಷ್ಟು ?

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

**51 ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ. ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ದಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

## ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆ ಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000


*online **R.T.E Monitoring : www.nireekshana.org.in***